# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XVII - 7 ಜುಲೈ 2000

ಈ ಸಂಚಿಕೆಯಲ್ಲಿ













| | |
|---|---|
| ಸಚಿವೆ ರಾಣಿ ಸತೀಶ್ ಅವರ ಭೇಟಿ | 2 |
| ರಂಜನೀಯ ಸಂಜೆ | 3 |
| ಕರ್ನಾಟಕ ಸಾಂಸ್ಕೃತಿಕ ಪರಂಪರೆ | 4 |
| ಕಲಾಸಾಧನೆಯ ಹಾದಿಯಲ್ಲಿ.... | 6 |
| Improving Value Systems | 9 |
| ಸಂದರ್ಶನ : ಕಲಾವಿದರೊಂದಿಗೆ | 12 |
| ಮಧುಶ್ರೀಯಲ್ಲಿ...... ಅಕ್ಕಮಹಾದೇವಿ | 14 |
| ಸುತ್ತಮುತ್ತ | 15 |


The Mysore Association, Mumbai
393, Bhaudaji Road, Matunga, Mumbai-400 019.
Tel.: 402 46 47 ● Grams: "KARUNADU"

# ಮೈಸೂರು ಅಸೋಸಿಯೇಷನ್ನಿಗೆ ಸಚಿವೆ ಶ್ರೀಮತಿ ರಾಣಿ ಸತೀಶರವರ ಭೇಟಿ

ಜೂನ್ 18 ಭಾನುವಾರದಂದು ಅಸೋಸಿಯೇಷನ್ನಿಗೆ ಕರ್ನಾಟಕದ ಸಾಂಸ್ಕೃತಿಕ ಇಲಾಖೆಯ ಮಂತ್ರಿಗಳಾದ ಶ್ರೀಮತಿ ರಾಣಿ ಸತೀಶ್‌ರವರು ಆಗಮಿಸಿದ್ದರು. ಶ್ರೀಮತಿ ಲಲಿತಾ ದೊರೆಸ್ವಾಮಿ ಹಾಗೂ ಶ್ರೀ ದೊರೆಸ್ವಾಮಿ ಮತ್ತು ಇತರ ಆಡಳಿತ ವರ್ಗದವರು ಅವರನ್ನು ಬರಮಾಡಿಕೊಂಡು. ಅಸೋಸಿಯೇಷನ್ನನ್ನು ಪರಿಚಯಿಸಿದರು. ನಂತರ ಅಸೋಸಿಯೇಷನ್ನಿನ ಉಪಸಂಸ್ಥೆಯಾದ ರಾಷ್ಟ್ರೀಯ ಕನ್ನಡ ಶಿಕ್ಷಣ ಶಾಲೆಯನ್ನು ನೋಡಿಕೊಂಡು ಬಂದರು. ನಂತರ ಅಸೋಸಿಯೇಷನ್ನಿನಲ್ಲಿ ಒಂದು ಸಣ್ಣ ಕಾರ್ಯಕ್ರಮವು ನಡೆಯಿತು. ಶ್ರೀ ಪ್ರಸಾದ್‌ರವರು ಎಲ್ಲರಿಗೂ ಸ್ವಾಗತ ಕೋರಿದರು. ಶ್ರೀಮತಿ ಶ್ಯಾಮಲಾರವರಿಂದ ಸ್ವಾಗತ ಗೀತೆಯಾದ ನಂತರ ಶ್ರೀ ದೊರೆಸ್ವಾಮಿಯವರು ಸ್ವಾಗತ ಭಾಷಣ ಮಾಡಿದರು. ಅಸೋಸಿಯೇಷನ್ನಿನ ಆಡಳಿತ ವರ್ಗದವರ, ಸದಸ್ಯರ ಎಲ್ಲರ ಪ್ರೋತ್ಸಾಹ ಹಾಗೂ ಸಹಾಯದಿಂದ ಇಂಥ ಒಂದು ಭವ್ಯ ಸಭಾ ಭವನವು ನಿರ್ಮಾಣವಾಗಿದೆ. ಇದರಲ್ಲಿ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದಿವೆ. ಇಂದು ಕರ್ನಾಟಕದ ಸಾಂಸ್ಕೃತಿಕ ಇಲಾಖೆಯ ಮಂತ್ರಿಗಳೇ ಬಂದಿರುವುದು ನಮ್ಮೆಲ್ಲರ ಸುದೈವ. ಅವರ ನೇತೃತ್ವದಲ್ಲಿ ನಮ್ಮ ಸಂಸ್ಕೃತಿ, ಭಾಷೆ ಎಲ್ಲವೂ ಮುಂದುವರಿಯುತ್ತದೆ ಎಂದು ಹೇಳಿ ಶ್ರೀಮತಿ ರಾಣಿಸತೀಶ್‌ರವರಿಗೆ ಪುಷ್ಪ ಗುಚ್ಛವನ್ನು ಅರ್ಪಿಸಿದರು.

ನಂತರ ಕನ್ನಡ ಕಲಾಕೇಂದ್ರದಿಂದ ಡಾ| ಶ್ರೀಮತಿ ಲಲಿತಾ ರಾವ್, ನವಿಮುಂಬಯಿ ಕನ್ನಡ ಸಂಘ, ಅಣುಶಕ್ತಿ ಕೇಂದ್ರ ಕನ್ನಡ ಸಂಘ, ರಾಷ್ಟ್ರೀಯ ಕನ್ನಡ ಶಾಲೆ, ತರಂಗಿಣಿ ಸಂಸ್ಥೆ, ಪದವೀದರ ಯಕ್ಷಗಾನ, ಬಸವ ಸಮಿತಿ, ಮೊಗವೀರ ಸಂಸ್ಥೆ, SWKC ಮಹಿಳಾ ಸಂಘ, ಮುಂಬಯಿ ಕನ್ನಡ ಸಂಘ, ವೀರಶೈವ ಬ್ಯಾಂಕ್, ಠಾಣೆ ಕನ್ನಡ ಸಂಘ, ಬಿಲ್ಲವರ ಸಂಘ, ದೇವಾಡಿಗರ ಸಂಘ, ಕರ್ನಾಟಕ ಸಂಘ, ಮೈಸೂರು ಸಂಗೀತ ವಿದ್ಯಾಲಯ ಹೀಗೆ ಅನೇಕ ಸಂಸ್ಥೆಗಳ ಮುಂದಾಳುಗಳು ತಮ್ಮ ಸಂಸ್ಥೆಯ ಪರವಾಗಿ ಪುಷ್ಪಗುಚ್ಛಗಳನ್ನರ್ಪಿಸಿದರು.

ನಂತರ ಸಚಿವರು ಮಾತನಾಡಿದರು. ಇವರು ಕಾಂಗ್ರೆಸ್ಸ್ ಮುಂದಾಳು ಶ್ರೀ ಎಚ್. ಎಮ್. ಚೆನ್ನಬಸಪ್ಪನವರ ಪುತ್ರಿ. ಅವರು ಇಲ್ಲಿಗೆ ಬರುವ ಮೊದಲು ಅವರ ಕಾರ್ಯದರ್ಶಿಗಳಲ್ಲಿ ಇಷ್ಟು ಕಡಿಮೆ ಕಾಲಾವಧಿಯಲ್ಲಿ ಆದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಮುಂಬೈ ಕನ್ನಡಿಗರನ್ನು ಭೇಟಿಮಾಡಬೇಕು ಎಂದು ಅರಿಕೆ ಮಾಡಿಕೊಂಡಿದ್ದರಂತೆ. ಹಾಗೆಯೇ ಅಸೋಸಿಯೇಷನ್ನಿನಲ್ಲಿ ಇಷ್ಟು ಜನ ಕನ್ನಡಿಗರನ್ನು ನೋಡಿ ಸಂತೋಷವಾಯಿತು ಎಂದರು. ನಿಮ್ಮ ಸಂಘಟನೆ, ಭಾವನೆ, ಕಾರ್ಯೋತ್ಸಾಹ ಇವುಗಳಿಗೆ ಬೆಲೆಕಟ್ಟಲೇ ಸಾಧ್ಯವಿಲ್ಲ. N.K.E.S. ನೋಡಿ ಬಂದಾಗ ಕನ್ನಡ ಅಕ್ಷರಗಳನ್ನು ನೋಡಿದಾಗ ಭಾವನೆಗೆ ಒತ್ತುಕೊಟ್ಟಿದ್ದು. ಕನ್ನಡದ ಹಿರಿಮೆ ಎತ್ತಿ ಹಿಡಿದಿದ್ದಾರೆ ಎಂದು, ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ವಾಣಿಜ್ಯದಲ್ಲಿ ಕನ್ನಡದ ಹಿರಿಮೆಯನ್ನು ಎತ್ತಿ ನಿಲ್ಲಿಸಿದ್ದೀರಿ. ಮಹಾರಾಷ್ಟ್ರದಲ್ಲಿ ಕನ್ನಡದ ಕಂಪು ಹರಡಿದ್ದೀರಿ ಎಂದರು. ಇಂತಹ ಭವನವನ್ನು ನೋಡಿದಾಗ ಆತ್ಮೀಯತೆ ಮೂಡಿ ಬರುತ್ತದೆ. ರಾಮಕೃಷ್ಣ ಪರಮಹಂಸ ಹಾಗೂ ಸ್ವಾಮಿ ವಿವೇಕಾನಂದರ ಚೈತನ್ಯವನ್ನು ಹೊರತಂದಿದೆ. ನಮ್ಮ ವಿಚಾರಧಾರೆ, ಸಂಸ್ಕೃತಿಯನ್ನು ನಮ್ಮ ಮಕ್ಕಳಲ್ಲೂ ಬೆಳೆಸಬೇಕು, ಕರ್ನಾಟಕವು ಸಂಸ್ಕೃತಿಯ ಶ್ರೀಮಂತಿಕೆಯ ರಾಜ್ಯ ಇಂಥ ಸಂಸ್ಕೃತಿಯನ್ನು ಮುಂಬೈನಂಥ ಆಧುನೀಕರಣ, ವೈಭವತೆ ಇರುವಲ್ಲಿ ಪ್ರಚಾರ ಮಾಡುತ್ತಿರುವುದು ಬಹಳ ಶ್ಲಾಘನೀಯ ಎಂದರು. ಮೈಸೂರಿನ ಪರಂಪರೆಯ ಸಂಸ್ಕೃತಿಯು ಬೆಳೆಸುವ ನಿಟ್ಟಿನಲ್ಲಿ ಈ ಸಂಸ್ಥೆ ಕೆಲಸ ಮಾಡುತ್ತಿದೆ. ''ದೂರದ ಬೆಟ್ಟ ನುಣ್ಣಗೆ...'' ಎಂಬಂತೆ ಕರ್ನಾಟಕದಲ್ಲಿ ನಮ್ಮ ಕನ್ನಡದ ಬೆಲೆಯು ಗೊತ್ತಾಗುವುದಿಲ್ಲ, ಹೊರನಾಡಿನಲ್ಲಿ ನಮ್ಮ ಕನ್ನಡಕ್ಕೆ ಎಷ್ಟು ಬೆಲೆಯಿದೆ ಎಂಬ ಅರಿವು ಈಗ ಬರುತ್ತದೆ. ಇಷ್ಟು ಕಡಿಮೆ ಅವಧಿಯಲ್ಲಿ ಇಷ್ಟು ಸಂಸ್ಥೆಗಳಿಂದ ಎಲ್ಲರೂ ಬಂದು ಭಾಗವಹಿಸಿದುದಕ್ಕಾಗಿ ನಾನು ಆಭಾರಿಯಾಗಿದ್ದೇನೆ. ಭಗವಂತನು ಹೀಗೆ ಎಲ್ಲರಿಗೂ ಶಕ್ತಿ ಮತ್ತು ಉತ್ಸಾಹ ಕೊಡಲಿ. ಮುಂದೆ ನಿಮ್ಮ ಕಾರ್ಯಕ್ರಮದಲ್ಲಿ ಭಾಗವಹಿಸುತ್ತೇನೆ. ಎಲ್ಲರೂ ಸೇರಿ ಕರ್ನಾಟಕದ ವೈಭವವನ್ನು ಹೆಚ್ಚಿಸಬಹುದು ಎಂದರು.



*ಕರ್ನಾಟಕದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಶ್ರೀಮತಿ ರಾಣಿ ಸತೀಶ್ ಅವರು ಮೈಸೂರು ಅಸೋಸಿಯೇಶನ್‌ನ ಸಭಾಂಗಣದಲ್ಲಿ ಮಾತನಾಡುತ್ತಿರುವುದು.*

ನಂತರ ಶ್ರೀ ಮಂಜುನಾಥಯ್ಯನವರು ನಾಲ್ಕು ಮಾತುಗಳನ್ನಾಡಿದರು. ಶ್ರೀಮತಿ ರಾಣಿ ಸತೀಶ್‌ರದು ಮೂರು ಪೀಳಿಗೆಗಳಿಂದ ಬಂದ ರಾಜಕೀಯ ಮನೆತನ. ಕರ್ನಾಟಕ ಮಂತ್ರಿಮಂಡಲದಲ್ಲಿ ಸ್ವಂತ ಇಚ್ಛೆಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ಆಯ್ದುಕೊಂಡಿರುವುದರಿಂದ ಸಂಸ್ಕೃತಿಯು ಇವರ ದಕ್ಷತೆಯಲ್ಲಿ ಮೇರು ಪರ್ವತವನ್ನು ಮುಟ್ಟುತ್ತದೆ. ಬೊಂಬಾಯಿಯಲ್ಲಿ ಅನೇಕ ಕನ್ನಡ ಸಂಘಗಳು (120) ಮತ್ತು ಕನ್ನಡಿಗರ ಹೋಟೆಲ್‌ಗಳು ಇರುವುದರಿಂದ ಕನ್ನಡಿಗ ಹೊಸಬನಲ್ಲ. ಸಾಹಿತ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಕರ್ನಾಟಕಕ್ಕಿಂತ ಬೊಂಬಾಯಿಯಲ್ಲಿ ಜಾಸ್ತಿ ನಡೆಯುತ್ತದೆ ಅನ್ನಿಸುತ್ತೆ. ಕನ್ನಡಿಗರ ಈ ಪ್ರೀತಿ ಅಭಿಮಾನವನ್ನು ನೀವು ಕರ್ನಾಟಕದಲ್ಲಿ ತಿಳಿಸುತ್ತೀರಾ ಎಂದು ನಂಬಿದ್ದೇನೆ. ಕರ್ನಾಟಕ ಸರ್ಕಾರವು ಅನೇಕ ವಿಧಗಳಲ್ಲಿ ಹೊರನಾಡಿನ ಕನ್ನಡಿಗರಿಗೆ ಇರುವ ಕಷ್ಟಗಳನ್ನರಿತು ಸಹಾಯ ಹಸ್ತ

(ಪುಟ 13ಕ್ಕೆ)

# ರಂಜನೀಯ ಸಂಜೆ




*ಶ್ರೀಮತಿ ಮಾಲತಿ ಶರ್ಮಾ, ಶ್ರೀಮತಿ ರತ್ನಮಾಲಾ ಪ್ರಕಾಶ್, ಶ್ರೀ ವೈ. ಕೆ. ಮುದ್ದುಕೃಷ್ಣ, ಶ್ರೀ ರಾಜು ಅನಂತಸ್ವಾಮಿ ಅವರ ತಂಡ ಸಂಗಡಿಗರೊಂದಿಗೆ ಮೈಸೂರು ಅಸೋಸಿಯೇಶನ್‌ನ ಸಭಾಂಗಣದಲ್ಲಿ ಹಾಡುತ್ತಿರುವುದು.*

ಸಂಗೀತ ಸಾಹಿತ್ಯ ಸಂಸ್ಕೃತಿ ಈ ಶಬ್ದಗಳೇ ಕೇಳಲು ಹಿತ, ಅದರಲ್ಲೂ ಸಂಗೀತವಂತೂ ಬಹಳ ಜನರಿಗೆ ಮೆಚ್ಚುಗೆ. ನೊಂದ ಮನಸ್ಸಿಗೆ ಇಂಪಾದ ಸಂಗೀತವು ತಂಪನ್ನೀಯುತ್ತದೆ. ಗಿಡ ಮರಗಳೂ ಪಕ್ಷಿ ಪ್ರಾಣಿಗಳೂ ಸಂಗೀತಕ್ಕೆ ತಲೆದೂಗುತ್ತವೆ. ಈ ಸಂಗೀತದಲ್ಲಿ ಅನೇಕ ವೈವಿಧ್ಯಗಳಿವೆ, ಶಾಸ್ತ್ರೀಯ ಸಂಗೀತ, ಲಘು ಸಂಗೀತ, ಜನಪದ ಸಂಗೀತ, ಸುಗಮ ಸಂಗೀತ, ನಾಟ್ಯ ಸಂಗೀತ, ಲಾವಣಿ ಹೀಗೆ ಹಲವಾರು. ಶಾಸ್ತ್ರೀಯ ಸಂಗೀತವನ್ನು ಆನಂದಿಸಲು ಸ್ವಲ್ಪ ಸಂಗೀತದ ಜ್ಞಾನವು ಬೇಕು. ಆದರೆ ಸಂಗೀತದ ಗಂಧವೇ ಇಲ್ಲದೆ ಒಳ್ಳೆಯ ಸಂಗೀತವನ್ನು ಕೇಳಿ ಆನಂದಿಸುವ ಒಂದು ವರ್ಗದವರೂ ಇದ್ದಾರೆ. (Goodlistners). ಆದರೆ ಸುಗಮ ಸಂಗೀತ ಹಾಗಲ್ಲ. ಕೇಳಿ ಆನಂದಿಸುವ ಮನೋವೃತ್ತಿ ಇರಬೇಕು. ಸುಗಮವಾಗಿ ಶ್ರೋತೃಗಳ ಮನಸ್ಸನ್ನು ಆಕರ್ಷಿಸುವ ಶಕ್ತಿ ಹೊಂದಿದೆ.

ಇಂತಹ ಒಂದು ಸುಗಮ ಸಂಗೀತ ಕಾರ್ಯಕ್ರಮವನ್ನು ಮೈಸೂರು ಅಸೋಸಿಯೇಷನ್ನಿನವರು ಜೂನ್ 10ರಂದು ಏರ್ಪಡಿಸಿದ್ದರು. ಬೆಂಗಳೂರಿನ ಸುಪ್ರಸಿದ್ಧ ಸುಗಮ ಸಂಗೀತದ ತಂಡವು ಶ್ರೀ ಮುದ್ದು ಕೃಷ್ಣ ಅವರ ನೇತೃತ್ವದಲ್ಲಿ ಈ ಕಾರ್ಯಕ್ರಮವನ್ನು ನಡೆಸಿಕೊಟ್ಟಿತು.

ಅಂದು ಸಂಜೆ 6-30 ಘಂಟೆಗೆ ಕಾರ್ಯಕ್ರಮವು ಪ್ರಾರಂಭ ವಾಯಿತು. ಶ್ರೀ ಪ್ರಸಾದ್‌ರವರು ಸ್ವಾಗತ ಭಾಷಣ ಮಾಡಿ ಕಲಾವಿದರ ಪರಿಚಯವನ್ನು ಮಾಡಿಕೊಟ್ಟರು. ಈ ತಂಡದಲ್ಲಿ ಶ್ರೀ ಮುದ್ದು ಕೃಷ್ಣ, ಶ್ರೀಮತಿ ರತ್ನಮಾಲಾ ಪ್ರಕಾಶ್, ಶ್ರೀಮತಿ ಮಾಲತಿ ಶರ್ಮ ಹಾಗೂ ರಾಜು ಅನಂತ ಸ್ವಾಮಿ ಇವರು ಪಾಲ್ಗೊಂಡಿದ್ದರು. ಶ್ರೀ ಮುದ್ದು ಕೃಷ್ಣ ಅವರು ಸುಗಮ ಸಂಗೀತ ಹಾಗೂ ರಂಗಭೂಮಿ ಎರಡರಲ್ಲೂ ನಿಷ್ಣಾತರು, ಗ್ರಾಮೀಣ ಪರಿಸರದಿಂದ ಬಂದ ಕಾರಣ ಇವರಿಗೆ ಜಾನಪದ ಸಂಗೀತದಲ್ಲೂ ಒಳ್ಳೆ ಪರಿಣತಿ ಇದೆ. ಹೀಗಾಗಿ ಇವರು ಜಾನಪದ ಸಂಗೀತ ಹಾಗೂ ಸುಗಮ ಸಂಗೀತದ ಬೆಳವಣಿಗೆಗೆ ಬಹಳ ಸಹಾಯ ಮಾಡಿದ್ದಾರೆ. ಕರ್ನಾಟಕ ರಾಜ್ಯದಾದ್ಯಂತ ಪಾಶ್ಚಾತ್ಯ ದೇಶಗಳಲ್ಲೂ ಇವರು ಕಾರ್ಯಕ್ರಮಗಳನ್ನು ನಡೆಸಿ ಕೊಟ್ಟಿದ್ದಾರೆ. ಫೀನಿಕ್ಸ್ ಉತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಶ್ರೀಮತಿ ರತ್ನಮಾಲಾ ಪ್ರಕಾಶ್‌ರವರು ಪ್ರಸಿದ್ಧ ಗಾಯಕಿ, ಶಾಸ್ತ್ರೀಯ ಹಾಗೂ ಸುಗಮ ಸಂಗೀತದಲ್ಲಿ ನಿಪುಣರು, ಪ್ರಸಿದ್ಧ ಗಾಯಕ ಶ್ರೀ R.K. ಶ್ರೀಕಂಠನ್‌ರವರ ಪುತ್ರಿ. ಇವರು ರಷ್ಯಾ, ಅಮೆರಿಕಾ ಮೊದಲಾದ ವಿದೇಶಗಳಲ್ಲಿಯೂ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ಅನೇಕ ಧ್ವನಿ ಸುರಳಿಗಳನ್ನು ಬಿಡುಗಡೆ ಮಾಡಿದ್ದಾರೆ.

ಶ್ರೀಮತಿ ಮಾಲತಿ ಶರ್ಮರವರು ಆಕಾಶವಾಣಿಯಲ್ಲಿ ಪ್ರಥಮ ದರ್ಜೆಯ ಕಲಾವಿದೆ. ಇವರಿಗೆ ರಾಜ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಇವರು ದೇಶ ವಿದೇಶಗಳಲ್ಲಿ ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ.

ರಾಜು ಅನಂತ ಸ್ವಾಮಿ ಇವರು ಸುಪ್ರಸಿದ್ಧ ಗಾಯಕ ಶ್ರೀ ಅನಂತಸ್ವಾಮಿ ಅವರ ಪುತ್ರರು. ಇವರು ಗಾಯಕರಲ್ಲದೇ ರಚನಕಾರರು ಹಾಗೂ ಉತ್ತಮ ತಬಲ ವಾದಕರು. ಇವರು ಕಾರ್ಯಕ್ರಮಗಳ ನಿಮಿತ್ತ ಅಮೇರಿಕಾ, ರಷ್ಯಾ ಮೊದಲಾದೆಡೆ ಹೋಗಿ ಬಂದಿದ್ದಾರೆ.

ಇವರಿಗೆ ಪಕ್ಕವಾದ್ಯದಲ್ಲಿ N.S. ಪ್ರಸಾದ್‌ರವರು ಮ್ಯಾಂಡೊಲಿನ್ ಹಾಗೂ ಅವರ ಸಹೋದರ N.S. ಮುರಳಿ ಕೊಳಲನ್ನು ನುಡಿಸಿದರು. ಕೃಷ್ಣ ಉಡುಪ ಅವರು 'ಕೀಬೋರ್ಡ್', ಸುದರ್ಶನ್ ಅವರು ಗಿಟಾರ್ ನುಡಿಸಿದರು. ಶ್ರೀ ದೇವಪ್ಪರವರು ತಬಲ ನುಡಿಸಿದರು. ದೇವಪ್ಪರವರು ಗಾಯಕ ದಿ। ಪಿ. ಕಾಳಿಂಗರಾಯರ ಕಾಲದಿಂದಲೂ ನುಡಿಸುತ್ತಿದ್ದಾರೆ.

ಪರಿಚಯದ ನಂತರ ಅಸೋಸಿಯೇಷನ್ನಿನ ಅಧ್ಯಕ್ಷರಾದ ಶ್ರೀ ದೊರೆಸ್ವಾಮಿ ಅವರು ಕಲಾವಿದರೆಲ್ಲರಿಗೂ ಪುಷ್ಪಗುಚ್ಛವನ್ನು ಅರ್ಪಿಸಿ ಗೌರವಿಸಿದರು.

ನಂತರ ಸುಗಮ ಸಂಗೀತವು ಆರಂಭವಾಯಿತು.

ಮೊದಲು ಕುವೆಂಪುರವರ ಕವನ ''ಜೈ ಭಾರತ ಜನನಿಯ ತನುಜಾತೆ...'' ಯಿಂದ ಕರ್ನಾಟಕ ಮಾತೆಗೆ ಜಯಕಾರ ಮಾಡಿ ಆರಂಭಿಸಿದರು. ''ಸಾಯೊಕ್ಮುಂಚೆ ನೋಡ್ಬೇಕು ಜೋಗಾದ್ ಗುಂಡಿ'' ಅಂತ ಹೇಳ್ತಾರೆ

*(ಪುಟ 16ಕ್ಕೆ)*

**FOR ALL YOUR DOMESTIC AND INTERNATIONAL TRAVEL ARRANGEMENTS**

*CONTACT*

**AUGUST TRAVEL SERVICE**

Agents For
INDIAN AIRLINES &
JET AIRLINES

**REGD. OFFICE :**
3/15, ASHIANA, SECTOR 17,
VASHI, NAVI MUMBAI
PHONES : 789 1970 * 789 1972
789 2451
GRAMS : AUGTRASERV

**ALSO AT :**
2/16, KABBUR HOUSE,
SION (E), MUMBAI-400 022.
PHONES : 407 2984 * 409 3573
407 7750

## ಕರ್ನಾಟಕ ಸಾಂಸ್ಕೃತಿಕ ಪರಂಪರೆ -2

# ಬನವಾಸಿಯ ಕದಂಬರು

-- ಸುಮಾ ದ್ವಾರಕಾನಾಥ್

'ಬನವಾಸಿ'ಯು ಭಾರತದ ಇತಿಹಾಸದಲ್ಲೇ ಚಾರಿತ್ರಿಕ ಮಹತ್ವವನ್ನು ಪಡೆದ ಭೂಮಿಯಾಗಿದೆ. ಮಹಾಭಾರತದಲ್ಲಿ ಬನವಾಸಿಯ ಉಲ್ಲೇಖವಿದೆ. 'ವೈಜಯಂತಿ' ಎಂಬುದು ಅದರ ಇನ್ನೊಂದು ಹೆಸರು. ಅಶೋಕ ಚಕ್ರವರ್ತಿಯು ಬೌದ್ಧ ಧರ್ಮ ಪ್ರಸಾರ ಕಾರ್ಯಕ್ಕೆ ಬೌದ್ಧ ಭಿಕ್ಷುಗಳನ್ನು ಬನವಾಸಿಗೆ ಕಳಿಸಿಕೊಟ್ಟಿದ್ದನು. ಗ್ರೀಕ್ ಚರಿತ್ರಕಾರ ಟಾಲೆಮಿ ತನ್ನ ಗ್ರಂಥದಲ್ಲಿ ಬನವಾಸಿಯ ಹೆಸರನ್ನು ಉಲ್ಲೇಖಿಸಿದ್ದಾನೆ. ಕದಂಬರ ಇತಿಹಾಸವನ್ನು ತಿಳಿದುಕೊಳ್ಳಲು ಶಾಸನಗಳೇ ಮೂಲ ಆಧಾರಗಳಾಗಿವೆ. ಈ ವಿಷಯದಲ್ಲಿ ಸಾಹಿತ್ಯದ ಮೂಲಗಳು ಸಾಕಷ್ಟಿಲ್ಲ. ಇಂದಿನ ಶಿವಮೊಗ್ಗಾ ಜಿಲ್ಲೆಯ, ಶಿಕಾರಿಪುರ ತಾಲ್ಲೂಕಿನ ತಾಳಗುಂದ ಶಾಸನ ಹಾಸನ ಜಿಲ್ಲೆಯ ಹಲ್ಮಿಡಿಶಾಸನ ಮತ್ತು ಬೆಳಗಾವಿ ಜಿಲ್ಲೆಯ 'ಹಲಸಿ ಶಾಸನ' ದೇವಸ್ಥಾನಗಳು ಕದಂಬರ ಚರಿತ್ರೆಯನ್ನು ನಿರೂಪಿಸಲು ಸಹಾಯಕವಾಗಿದೆ. ಕ್ರಿ.ಶ. ೪ನೇ ಶ.ದ ಪೂರ್ವಾರ್ಧದಲ್ಲಿ ಸ್ಥಾಪಿತವಾದ ಕದಂಬ ರಾಜ್ಯವು ಕ್ರಿ.ಶ. ೬ನೇ ಶ.ದ. ಅಂತ್ಯದಲ್ಲಿ ಕೊನೆಗೊಂಡಿತಾದರೂ ಆ ಮನೆತನದ ಶಾಖೆಗಳಿಗೆ ಸಂಬಂಧಿಸಿದ ಅರಸರು ಪುನಃ ೧೦ ಹಾಗೂ ೧೧ ಶ.ದಲ್ಲಿ ಕಲ್ಯಾಣದ ಚಾಲುಕ್ಯರ ಮಾಂಡಲಿಕರಾಗಿರುವುದನ್ನು ಕಾಣುತ್ತೇವೆ.

**ಕದಂಬ ರಾಜ್ಯ ಸಂಸ್ಥಾಪಕ ಮಯೂರ ಶರ್ಮ :** ಕ್ರಿ.ಶ. ೩೪೫ರಿಂದ ೩೬೫ರ ವರೆಗೆ ರಾಜ್ಯವಾಳಿದ ಮಯೂರ ಶರ್ಮನಿಂದ ಕರ್ನಾಟಕದಲ್ಲಿ ಕದಂಬ ಕುಲದ ಚರಿತ್ರೆ ಆರಂಭವಾಗುತ್ತದೆ. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ಭಾಗದ ತಾಳಗುಂದ ಎಂಬ ಗ್ರಾಮದಲ್ಲಿ ಮಾನವ್ಯಗೋತ್ರದ ಒಂದು ಕುಲೀನ ಬ್ರಾಹ್ಮಣ ಮನೆತನವಿದ್ದಿತು. ಆ ಮನೆಯ ಅಂಗಳದಲ್ಲಿ ಕದಂಬ ವೃಕ್ಷವು ಇದ್ದುದರಿಂದ ಅವರು ಕದಂಬರೆಂದು ಹೆಸರಾದರು.

ಮಯೂರನ ಜನ್ಮ ಸ್ಥಳವಾದ 'ವೈಜಯಂತಿ' ಅಥವಾ 'ಬನವಾಸಿ' ಆಗ ಪಲ್ಲವರ ಸಾಮ್ರಾಜ್ಯಕ್ಕೆ ಸೇರಿದ್ದಿತು. ಪಲ್ಲವರ ರಾಜಧಾನಿ 'ಪಲ್ಲವೇಂದ್ರಪುರಿ' ಅಥವಾ 'ಕಂಚಿ' ಆಗ ಪ್ರಖ್ಯಾತ ವಿದ್ಯಾಕೇಂದ್ರವಾಗಿದ್ದಿತು. ವೈಜಯಂತಿಯಲ್ಲಿಯ ವಿದ್ಯಾಭ್ಯಾಸವನ್ನು ಮುಗಿಸಿದ ಮಯೂರ ಶರ್ಮ ಹೆಚ್ಚಿನ ಅಧ್ಯಯನಕ್ಕಾಗಿ ತನ್ನ ಗುರು ವೀರಶರ್ಮನೊಡನೆ ಕಂಚಿಗೆ ತೆರಳಿದ. ಮಯೂರ ಶರ್ಮ ಕಂಚಿಯನ್ನು ತಲುಪಿದಾಗ ಅಲ್ಲಿಯ ದೊರೆ ಶಿವಸ್ಕಂದ ವರ್ಮನು ಅಶ್ವಮೇಧ ಯಾಗವನ್ನು ಮಾಡುವ ಸಿದ್ಧತೆಯಲ್ಲಿದ್ದನು. ವ್ಯಾಸಂಗ ನಿರತನಾದ ಮಯೂರ ಶರ್ಮನಿಗೂ ಪಲ್ಲವರ ಅಶ್ವಶಾಲೆಯ ಪಹರೆಯವರಿಗೂ ವಿನಾಕಾರಣವಾಗಿ ಕಲಹವಾಯಿತು, ಪಲ್ಲವರ ರಾವುತರಿಂದ ಮಯೂರ ಶರ್ಮನಿಗೆ ಅವಮಾನವಾಯಿತು. ಸ್ವಾಭಿಮಾನಿಯಾದ ಶರ್ಮನು, ತನಗಾದ ಅನ್ಯಾಯಕ್ಕೆ ಪಲ್ಲವರ ಅರಸು ಶಿವಸ್ಕಂದನು ತಿರಸ್ಕಾರದ ಪ್ರತಿಕ್ರಿಯೆಯನ್ನು ತೋರಿದಾಗ, ಅದರ ಕೆಚ್ಚೇ ಅವನಲ್ಲಿ ಸಾಮ್ರಾಜ್ಯದ ಮಹಾತ್ವಾಕಾಂಕ್ಷೆಯನ್ನು ಹೊತ್ತಿಸಿತು. ತಾನು ಬ್ರಾಹ್ಮಣನೆಂಬ ಕಾರಣಕ್ಕಾಗಿ ತನ್ನನ್ನು ಅಪಮಾನ ಮಾಡಿಸಿದರೆಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಬ್ರಾಹ್ಮಣ್ಯವನ್ನೇ ತ್ಯಜಿಸಿ ಕೈಯ್ಯಲ್ಲಿ ಖಡ್ಗವನ್ನು ಹಿಡಿದು ಚಿತ್ರದುರ್ಗದ ಸಮೀಪದ ಚಂದ್ರವಳ್ಳಿ ಕಣಿವೆ ಪ್ರದೇಶದಲ್ಲಿ ನೆಲಸಿ, ಸೈನ್ಯವನ್ನು ಕಟ್ಟಿ ಬಲಿಷ್ಠರಾಗಿದ್ದ ಪಲ್ಲವರನ್ನೇ ಸೋಲಿಸಿ ಅವರಿಂದಲೇ ಅಭಿಷಿಕ್ತನಾಗಿದ್ದಾನೆ. ಬ್ರಾಹ್ಮಣ ಕದಂಬ ವಂಶವು ಹೀಗೆ ಕ್ಷತ್ರಿಯ ಕದಂಬ ವಂಶವಾಗಿ ಪರಿವರ್ತನೆಯನ್ನು ಹೊಂದಿತು. ಮಯೂರ ಶರ್ಮನ ಬಳಿಕ ಉಳಿದ ದೊರೆಗಳೆಲ್ಲಾ 'ಶರ್ಮ' ಎಂದು ಕೊನೆಯಾಗುವ ಬ್ರಾಹ್ಮಣ ಸೂಚಕ ಹೆಸರುಗಳನ್ನು ತ್ಯಜಿಸಿ 'ವರ್ಮ' ಎಂದು ಕೊನೆಯಾಗುವ ಪಾತ್ರ ಸೂಚಕ ಹೆಸರುಗಳನ್ನಿಟ್ಟುಕೊಂಡರು.

ಕದಂಬರಿಗಿಂತ ಮೊದಲು ಕರ್ನಾಟಕವನ್ನು ಆಳುತ್ತಿದ್ದ ದೊರೆಗಳು 'ಮೌರ್ಯರು' ಬಳಿಕ ಆಂಧ್ರದ 'ಶಾತವಾಹನರು'. ನಂತರ ತಮಿಳುನಾಡಿನ 'ಪಲ್ಲವರು' ಕದಂಬ ವಂಶವೇ ಕರ್ನಾಟಕವನ್ನು ಆಳಿದ, ಕನ್ನಡವನ್ನು ಮನೆಮಾತಾಗಿ ಉಳ್ಳ ಮೊದಲ ಕನ್ನಡಿಗರ ರಾಜ ವಂಶ. ಕನ್ನಡ ಜನ ತಮ್ಮನ್ನು ತಾವು ಆಳಿಕೊಳ್ಳಲು ಆರಂಭಿಸಿದ್ದು ಕದಂಬರ ಕಾಲದಿಂದ. ಸಹಜವಾಗಿಯೇ ಕದಂಬರಿಂದಾಗಿ ಕನ್ನಡ ಜನಕ್ಕೆ ಆತ್ಮ ವಿಶ್ವಾಸವು ಮೂಡಿತು. ಅವರು ಕನ್ನಡವನ್ನು ಆಡಳಿತ ಭಾಷೆಯಾಗಿ ಮತ್ತು ಸಾಂಸ್ಕೃತಿಕ ಭಾಷೆಯಾಗಿ ಬೆಳೆಸಿದರು.

ಚಂದ್ರವಳ್ಳಿಯ ಶಾಸನವೊಂದರಲ್ಲಿ ಮಯೂರ ವರ್ಮನು ಪಲ್ಲವರನ್ನು, ಕರ್ನಾಟಕದ ಒಳಹೊರಗಣ ಮತ್ತೆ ಬೇರೆ ಪ್ರಮುಖರನ್ನೂ ಸೋಲಿಸಿದಂತೆ ಹೇಳಿದೆ. ಉತ್ತರದಲ್ಲಿ ಮಾಳವ, ಗಯಾಗಳನ್ನೊಳಗೊಂಡ ವಿಸ್ತಾರವಾದ ಪ್ರದೇಶದ ಮೇಲೆ ಅವನು ರಾಜ್ಯವಾಳಿದನು. ಅವನ ಆಳ್ವಿಕೆಯ ಮೊದಲಲ್ಲಿ ಅವನು ಕೆಲವು ಕಾಲ ಪಲ್ಲವರ ಸೇನಾಪತಿಯಾಗಿದ್ದನು. ಅಧೀನರಾಜನಾಗಿ 'ಪಟ್ಟಬಂಧಸಂಪೂಜೆ'ಯನ್ನೂ ಸ್ವೀಕರಿಸಿದ್ದನು. ಆದರೆ ಕೊನೆಯಲ್ಲಿ ಮಾತ್ರ ಪಲ್ಲವರಿಂದ ಸಂಪೂರ್ಣ ಸ್ವತಂತ್ರನಾದನೆಂದು ಹೇಳಬಹುದು. ಅವನ ಸಾಮ್ರಾಜ್ಯವು ಕಾವೇರಿಯಿಂದ ಗೋದಾವರಿಯವರೆಗೆ ತಪ್ಪಲು ಪ್ರದೇಶದ ನಟ್ಟ ನಡುವಿನ ಅಂಡಾಕೃತಿಯ ಭೂ ಭಾಗವನ್ನೊಳಗೊಳ್ಳುವಂತೆ ಹಬ್ಬಿತು.

ಕನ್ನಡದ ಶಾಸನಗಳಲ್ಲಿ 'ಕರ್ನಾಟ' ಎಂಬ ಪದವನ್ನು ಹೆಚ್ಚಾಗಿ ಬಳಸಲಾಗಿದೆ. ಆದ್ದರಿಂದ ಕರ್ನಾಟಕದ ಸಮಗ್ರ ಕಲ್ಪನೆ ಕದಂಬರಲ್ಲಿ ಮೊಟ್ಟ ಮೊದಲು ಸೃಜಿಸಿತೆಂದು ಹೇಳಬಹುದು. ಕರ್ನಾಟಕ ಚರಿತ್ರೆಯಲ್ಲಿ ಕದಂಬರಸ್ಥಾನವು ಈ ದೃಷ್ಟಿಯಿಂದ ಮಹತ್ತರವಾಗಿದೆ. ಮಯೂರ ಶರ್ಮನು, ಮಯೂರವರ್ಮನಾಗಿ ದಕ್ಷತೆಯಿಂದ ರಾಜ್ಯಭಾರಮಾಡಿ ಕರ್ನಾಟಕದ ಪ್ರಪ್ರಥಮ ಚಕ್ರವರ್ತಿ ಎಂದು ಅಖಿಲ ಭಾರತೀಯ ಮಾನ್ಯತೆಯನ್ನು ಪಡೆದನು. ಕದಂಬರ ರಾಜ ಲಾಂಛನವು 'ಸಿಂಹ' ಅವರ ಧ್ವಜದಲ್ಲಿ 'ವಾನರ ಚಿನ್ಹೆ' ಇದ್ದಿತು. ಮಯೂರ ವರ್ಮನ ಮರಿ ಮಗನಾದ ಕಾಕುತ್ಸ್ಥ ವರ್ಮನು ಈ ವಂಶದಲ್ಲಿಯ ಪ್ರಮುಖ ಅರಸನೆಂದು ಹೇಳುತ್ತಾರೆ. ಕ್ರಿ.ಶ. ೪೫೦ರ ಸುಮಾರಿನ ತಾಮ್ರ ಪಟವೊಂದರಲ್ಲಿ ಅವನ ಮಗನಾದ ಶಾಂತಿ ವರ್ಮನನ್ನು 'ಸಮಸ್ತ ಕನ್ನಡ ನಾಡಿನ ದೊರೆ' ಎಂದು ಹೊಗಳಲಾಗಿದೆ.

**ಕರ್ನಾಟಕ ಸಂಸ್ಕೃತಿಗೆ ಕದಂಬರ ಕಾಣಿಕೆ :** ಶಾತವಾಹನರ ನಂತರ ಸುಮಾರು ಮೂರು ಶತಮಾನಗಳ ಕಾಲ ಕರ್ನಾಟಕ್ಕೆ ರಾಜಕೀಯ ಸ್ಥಿರತೆಯನ್ನು ನೀಡಿದರು. 'ವೇಸರ' ಪದ್ಧತಿಯ ವಾಸ್ತುಶಿಲ್ಪಕ್ಕೆ ಅಡಿಪಾಯ ಹಾಕಿದರು. ಪರಮತ ಸಹಿಷ್ಣುತೆ, ಪ್ರಜಾವಾತ್ಸಲ್ಯಗಳಿಗೆ ಹೆಸರಾದ ಕದಂಬರು ಮುಂದಿನ ಅರಸರಿಗೆ ಮಾದರಿಯಾದರು. ಇವರ ಆಡಳಿತ ವ್ಯವಸ್ಥೆಯ ಸುವ್ಯವಸ್ಥಿತವಾಗಿತ್ತು. ರಾಜ್ಯವನ್ನು

ಆಡಳಿತದ ದೃಷ್ಟಿಯಿಂದ ನಾಲ್ಕು ಪ್ರಾಂತಗಳನ್ನಾಗಿ ಮಾಡಿ ಕೇಂದ್ರೀಯ ಸರಕಾರದ ಆಡಳಿತ ವ್ಯವಸ್ಥೆಯನ್ನು ಅನುಸರಿಸುತ್ತಿದ್ದರು. 'ಅನುವಂಶಿಕಾ ರಾಜತ್ವ', 'ಯುವರಾಜ ಪದ್ಧತಿ' ರೂಢಿಯಲ್ಲಿತ್ತು. ಧರ್ಮಸೂತ್ರಗಳ ಪ್ರಕಾರ ಆಡಳಿತದ ನ್ಯಾಯ ನಿರ್ವಹಣೆಯಾಗುತ್ತಿದ್ದುದರಿಂದ ರಾಜನನ್ನು ಶಾಸನಗಳಲ್ಲಿ 'ಧರ್ಮ ಮಹಾರಾಜ'ರೆಂದು ಕರೆಯಲಾಗಿದೆ. ಪ್ರಾಂತಾಧಿಕಾರಿಗಳನ್ನು ರಾಜನೇ ನೇಮಿಸುತ್ತಿದ್ದನು. ಒಂದೊಂದು ಪ್ರಾಂತ್ಯದಲ್ಲಿ ಹಲವು ನಾಡುಗಳಿರುತ್ತಿದ್ದವು. ರಾಜ್ಯಪಾಲ ಮತ್ತು ಇತರ ಅಧಿಕಾರಿಗಳ ಸಹಾಯದಿಂದ ಅರಸನು ಆಡಳಿತದ ಮೇಲ್ವಿಚಾರಣೆ ಮಾಡುತ್ತಿದ್ದನು.

ರಾಜ ನಿರಂಕುಶ ಪ್ರಭುವಾಗಿರಲಿಲ್ಲ, ಅಮಾತ್ಯ ಪರಿಷತ್ತಿನ ಸಲಹೆ ಹಾಗೂ ಪ್ರಜೆಗಳ ಅಭಿಪ್ರಾಯದಂತೆ ರಾಜ್ಯವಾಳುತ್ತಿದ್ದ. ಆಡಳಿತದ ಅನುಕೂಲ ದೃಷ್ಟಿಯಿಂದ ವಿಶಾಲವಾದ ರಾಜ್ಯವನ್ನು ಮಂಡಲಗಳು, 'ವಿಷಯ'ಗಳು, 'ಮಹಾಗ್ರಾಮ'ಗಳು, 'ದಶಗ್ರಾಮ'ಗಳು, ಹಾಗೂ ಗ್ರಾಮ'ಗಳೆಂದು ಪ್ರಾದೇಶಿಕವಾಗಿ ವಿಭಜನೆ ಮಾಡಲಾಗಿತ್ತು. ಭೂಕಂದಾಯ ರಾಜ್ಯ ಸರಕಾರದ ಮುಖ್ಯ ಆದಾಯದ ಮೂಲವಾಗಿತ್ತು. ಯುದ್ಧಗಳಿಂದ ಸಂಪಾದಿಸಿದ ಸಂಪತ್ತು, ಸಾಮಂತ ಅರಸರಿಂದ ಪಡೆದ ಕಪ್ಪಕಾಣಿಕೆಗಳು, ಉದ್ಯೋಗಕರ, ಉಪ್ಪಿನಕರ ರಾಜ್ಯದ ಪ್ರಮುಖ ಆದಾಯದ ಮೂಲಗಳಾಗಿದ್ದವು. ಕೃಷಿಕರು ಬೆಳೆದ ಬೆಳೆಯ 1/6 ಭಾಗವು ಕಂದಾಯ ರೂಪದಲ್ಲಿ ಬರುತ್ತಿತ್ತು. ಕೆಲವು ವೃತ್ತಿಗಳ ಮೇಲೆ ತೆರಿಗೆಗಳನ್ನು ಹಾಕಲಾಗುತ್ತಿತ್ತು. ಅರಸನಿಗೆ ಪ್ರತ್ಯೇಕ ಜಮೀನುಗಳಿದ್ದು, ಅದರ ಆದಾಯದ 1/4 ಭಾಗವನ್ನು ದಾನ ಧರ್ಮಗಳಿಗೆ ಹಂಚುತ್ತಿದ್ದನು.

ಅರಸನೇ ಶ್ರೇಷ್ಠ ನ್ಯಾಯಧೀಶನಾಗಿದ್ದು. ನ್ಯಾಯಾಲಯದಲ್ಲಿ ಅರಸನಿಗೆ 'ಧರ್ಮಾಧ್ಯಕ್ಷ'ರೆಂಬ ಅಧಿಕಾರಿಗಳು ನೆರವಾಗುತ್ತಿದ್ದರು. ವಿವಿಧ ನ್ಯಾಯಾಲಯಗಳಿಗೆ 'ಧರ್ಮಾಧ್ಯಕ್ಷ'ನು ನ್ಯಾಯಧೀಶನಾಗಿರುತ್ತಿದ್ದನು. ಅತ್ಯಂತ ಮಹತ್ವದ ವ್ಯಾಜ್ಯಗಳನ್ನು ರಾಜನು ಪರಿಹರಿಸುತ್ತಿದ್ದನು. ಮರಣ ದಂಡನೆಯನ್ನು ಯಾರಿಗೂ ವಿಧಿಸುತ್ತಿರಲಿಲ್ಲ. ಶಿಕ್ಷೆಗೆ ಪ್ರತಿಯಾಗಿ ದಂಡದ ರೂಪದಲ್ಲಿ ಹಣ ವಸೂಲು ಮಾಡಲಾಗುತ್ತಿತ್ತು. ಅಪರಾಧಿಗಳಿಗೆ ಕಾರಾಗೃಹವಾಸ, ಜುಲ್ಮಾನೆ, ಅಗ್ನಿ ಪರೀಕ್ಷೆ ಮುಂತಾದುವು ಪ್ರಚಲಿತದಲ್ಲಿದ್ದುವು. ಕೊಲೆಗಡುಕನು ಕೊಲೆಯಾದ ವ್ಯಕ್ತಿಯ ಸಂಬಂಧಿಕರಿಗೆ ನೂರುಗದ್ಯಾಣ, ಸರಕಾರಕ್ಕೆ ಐವತ್ತು ಗದ್ಯಾಣಗಳನ್ನು ಕೊಟ್ಟು ಶಿಕ್ಷೆ ತಗ್ಗಿಸಿಕೊಂಡ ಪ್ರಕರಣವು ಶಾಸನದಲ್ಲಿ ಉಲ್ಲೇಖವಾಗಿದೆ.

ಕದಂಬರ ಸೈನ್ಯವು ಚತುರಂಗ ಬಲದಿಂದ ಕೂಡಿತ್ತು. ಯುದ್ಧದಲ್ಲಿ ಸ್ವತಃ ಅರಸನೇ ಸೇನಾಧಿಪತ್ಯವನ್ನು ವಹಿಸುತ್ತಿದ್ದ. ಅಶ್ವ ಪಡೆಯು ಸೈನ್ಯದ ಮುಖ್ಯ ಅಂಗವಾಗಿತ್ತು.

ಕದಂಬರ ಸಮಾಜದಲ್ಲಿ ವರ್ಣಾಶ್ರಮ ಧರ್ಮಗಳು ಅಸ್ತಿತ್ವದಲ್ಲಿದ್ದುವು. 'ಸಹಗಮನ' ಪದ್ಧತಿ ರೂಢಿಯಲ್ಲಿತ್ತು. ಗ್ರಾಮವು ವಿವಿಧ ವೃತ್ತಿಯನ್ನು ಕೈಗೊಂಡ ಜನರಿಂದ ಕೂಡಿತ್ತು. ಗ್ರಾಮಗಳ ಆಡಳಿತ ವ್ಯವಸ್ಥೆ, ನ್ಯಾಯತೀರ್ಮಾನ ಮತ್ತು ಕೆರೆ ಬಾವಿಗಳ ನಿರ್ಮಾಣ ಕಾರ್ಯಗಳನ್ನು ಗ್ರಾಮ ಪಂಚಾಯತಿಗಳು ನಿರ್ವಹಿಸುತ್ತಿದ್ದವು. ಕೃಷಿ ಮುಖ್ಯ ಉದ್ಯೋಗವಾದರೂ 'ನೇಕಾರಿಕೆ' 'ಪಾತ್ರೆ ತಯಾರಿಕೆ' ಜನಪ್ರಿಯ ಕೈಗಾರಿಕೆಗಳಾಗಿದ್ದವು. ಗೋವಾ, ಅಂಕೋಲಾ, ಹೊನ್ನಾವರ, ಮಂಗಳೂರುಗಳಲ್ಲಿ ವ್ಯಾಪಾರ ಕೇಂದ್ರಗಳಿದ್ದುವು. ಪದ್ಮಟಂಕ, ದ್ರಾಮ, ಗದ್ಯಾಣ, ಪಣ, ಸುವರ್ಣವರಹ ಮುಂತಾದ ನಾಣ್ಯಗಳು ಚಲಾವಣೆಯಲ್ಲಿದ್ದವು.

ಕದಂಬರು ವೈದಿಕ ಧರ್ಮದವರಾದರೂ, ಬೌದ್ಧ, ಜೈನ ಧರ್ಮಗಳು ಇವರ ಆಶ್ರಯ ಪಡೆದಿದ್ದವು. ಹಾನಗಲ್, ಲಕ್ಷ್ಮೇಶ್ವರ ಜೈನರ ಕೇಂದ್ರಗಳಾಗಿದ್ದರೆ, ಅಜಂತಾ ಬನವಾಸಿಗಳು ಬೌದ್ಧರ ಕೇಂದ್ರಗಳಾಗಿದ್ದುವು. ಹ್ಯೂಯೆನ್‌ತ್ಸಾಂಗ್ ಬನವಾಸಿಯ ಬೌದ್ಧರನ್ನು ಪ್ರಸ್ತಾಪಿಸಿದ್ದಾನೆ. ಸರ್ವಧರ್ಮ ಸಮಭಾವ ಕದಂಬರ ಕಾಣಿಕೆ.

ಕದಂಬರ ಕಾಲದಲ್ಲಿ 'ಪ್ರಾಕೃತ' ನಂತರ 'ಸಂಸ್ಕೃತ', ಕೊನೆಯಲ್ಲಿ ಕನ್ನಡ ರಾಜ ಭಾಷೆಯ ಸ್ಥಾನವನ್ನು ಬೆಳಸಿದವು. ಕಾಕುತ್ಸ್ಥ ವರ್ಮನು ಬರೆಸಿದ ೫ನೇ ಶ.ದ. 'ಹಲ್ಮಿಡಿ ಶಾಸನ'ವು ಕದಂಬರ ಕನ್ನಡದ ಮೊದಲ ಶಾಸನವಾಗಿದೆ. ಶಾಂತಿವರ್ಮನ ತಾಳಗುಂದ ಶಾಸನ'ವು ಸಂಸ್ಕೃತದಲ್ಲಿದೆ.

ಕದಂಬರು ವೇದ ಪಾರಂಗತರು ವಿದ್ಯಾ ಪ್ರೇಮಿಗಳೂ, ವಿದ್ಯಾಪೋಷಕರೂ ಆಗಿದ್ದರು. ಶಿಕ್ಷಣವು ನೈತಿಕ ನೆಲೆಗಟ್ಟನ್ನು ಆಧರಿಸಿತ್ತು. ಗುರುಕುಲ ಪದ್ಧತಿಯ ಶಿಕ್ಷಣವು ಉಚಿತವೂ, ಮುಕ್ತವೂ ಆಗಿತ್ತು. ಬೌದ್ಧ, ಜೈನ ಮಠಗಳು, ಬ್ರಾಹ್ಮಣರ ಅಗ್ರಹಾರಗಳು ಮತ್ತು ಘಟಿಕೆಗಳು ಶಿಕ್ಷಣ ನೀಡುವ ವಿದ್ಯಾಕೇಂದ್ರಗಳಾಗಿದ್ದವು. ಧಾರ್ಮಿಕ ಮತ್ತು ಬೌದ್ಧಿಕ ವಿಷಯಗಳೆರಡನ್ನು ಬೋಧಿಸಲಾಗುತ್ತಿತ್ತು. ವೇದಿಕೆಯ ಮೇಲೆ ವಾದ ಮಾಡಿ ಗೆಲ್ಲುವ ವ್ಯಕ್ತಿಗೆ 'ಘಟಿಕ ಸಾಹಸಿ' ಎಂಬ ಬಿರುದು ಕೊಡಲಾಗುತ್ತಿತ್ತು. ಉಚ್ಚ ಮಟ್ಟದ ಶಿಕ್ಷಣದಲ್ಲಿ ವೇದ, ವೇದಾಂತ, ಪುರಾಣಸ್ತುತಿ ಭಾಷೆ, ತತ್ವಜ್ಞಾನ, ಸಾಹಿತ್ಯ ಶಿಲ್ಪ ವಿದ್ಯೆ, ಸಂಗೀತ ಮತ್ತು ಇತರ ಕಲೆಗಳು ಬೋಧನೆಯ ವಿಷಯಗಳಾಗಿದ್ದುವು. ಪಂಡಿತರಿಗೆ ಕವಿಗಳಿಗೆ, ವಾಗ್ಮಿಗಳಿಗೆ ರಾಜರಿಂದ ವಿಶೇಷ ಮನ್ನಣೆ ದೊರೆಯುತ್ತಿದ್ದವು. ಕನ್ನಡ ಭಾಷೆಯ ಬೆಳವಣಿಗೆಗೆ ವಿಶೇಷ ಪ್ರಾತಿನಿಧ್ಯ ನೀಡಲಾಗಿತ್ತು.

**ಕಲೆ ಮತ್ತು ವಾಸ್ತು ಶಿಲ್ಪ** : ಕರ್ನಾಟಕದ ಮೂರ್ತಿ ಶಿಲ್ಪಗಳಿಗೆ ಮತ್ತು ವಾಸ್ತು ಶಿಲ್ಪಕ್ಕೆ ಕದಂಬರು ಕೊಟ್ಟ ಕೊಡುಗೆಗಳು ವಿಶಿಷ್ಟವಾಗಿವೆ. ಚಾಲುಕ್ಯ ಪೂರ್ವಕಾಲದ ವಾಸ್ತು ಶಿಲ್ಪವನ್ನು 'ಮೊರೆಸ್' ಕದಂಬ ವಾಸ್ತು ಶಿಲ್ಪವೆಂದು ಹೆಸರಿಸಿದ್ದಾರೆ. ಶಿಖರಗಳಿಲ್ಲದ ಮಟ್ಟಸವಾದ ಮೇಲ್ಛಾವಣಿಯುಳ್ಳ 'ವೇಸರ' ಪದ್ಧತಿಯ ಶಿಲ್ಪಕ್ಕೆ ಕದಂಬರು ಅಡಿಪಾಯ ಹಾಕಿದರು. ಹಲಸಿ, ಬನವಾಸಿ, ತಾಳಗುಂದ ಸ್ಥಳಗಳಲ್ಲಿ ಕದಂಬರ ವಾಸ್ತು ಶಿಲ್ಪಗಳನ್ನು ಕಾಣಬಹುದು.

ಹಲಸಿಯ ದೇವಾಲಯ ಮತ್ತು ಲಕ್ಷ್ಮೀನಾರಾಯಣ ವಿಗ್ರಹವು ಅತ್ಯಂತ ಪ್ರಾಚೀನದ್ದಾಗಿದೆ. ಸರಳ ವಿನ್ಯಾಸದ ಈ ದೇವಾಲಯಗಳಲ್ಲಿ 'ಗರ್ಭಗುಡಿ' ಮತ್ತು 'ಸುಕನಾಸಿ' ಇದೆ. ಒರಟಾದ ಬಂಡೆಯಿಂದ ಕೆತ್ತಿದ ಗೋಡೆಗಳಿವೆ. ಗರ್ಭಗುಡಿಗಿಂತಲೂ ಸುಕನಾಸಿಯು ಅಗಲವಾಗಿದೆ. ಗರ್ಭಗುಡಿ ಮತ್ತು ಸುಕನಾಸಿಗಳನ್ನು ಪ್ರತ್ಯೇಕ ಭಾಗಗಳನ್ನಾಗಿ ಮಾಡಿದ್ದು ಕದಂಬ ವಾಸ್ತು ಶಿಲ್ಪದ ಒಂದು ವಿಶಿಷ್ಟ ಅಂಶವೆಂದು ಹೇಳಲಾಗಿದೆ.

ತಾಳಗುಂದದ ದೇವಾಲಯದಲ್ಲಿ ನುಣುಪಾದ ಕಲ್ಲುಗಳಿಂದ ಗೋಡೆಗಳನ್ನು ಕಟ್ಟಲಾಗಿದೆ. ಕಂಬಗಳು ಕಲಾತ್ಮಕವಾಗಿದೆ. ಕಂಬದ ಕೆಳಭಾಗದಲ್ಲಿ ದ್ವಾರಪಾಲಕರ ವಿಗ್ರಹಗಳಿವೆ. ಬಾಗಿಲಿನ ಚೌಕಟ್ಟುಗಳು ಹೂಗಳಿಂದ ಅಲಂಕೃತವಾಗಿವೆ. ಚೌಕಟ್ಟಿನ ಮಧ್ಯೆ ಗಣಪತಿಯ ವಿಗ್ರಹ ಕೆತ್ತಲಾಗಿದೆ. ಗರ್ಭಗುಡಿಯಲ್ಲಿ ಲಿಂಗವನ್ನು ಸ್ಥಾಪಿಸಲಾಗಿದೆ.

ಬನವಾಸಿಯ 'ಮಧುಕೇಶ್ವರ' ದೇವಾಲಯ ಮತ್ತು 'ಕಲ್ಲೇಶ್ವರ' ದೇವಾಲಯವು ಕದಂಬ ವಾಸ್ತು ಶಿಲ್ಪದ ಅಭಿವೃದ್ಧಿಯ ಪ್ರತೀಕವಾಗಿದೆ. ಗರ್ಭಗುಡಿ ಮತ್ತು ಸುಕನಾಸಿಗಳ ಜೊತೆಗೆ ಮಂಟಪವನ್ನು ನಿರ್ಮಿಸಲಾಗಿದೆ. ಸ್ತಂಭಗಳನ್ನು ಹೊಸ ಮಾದರಿಯಲ್ಲಿ ನಿರ್ಮಿಸಿದ್ದು ಅಲಂಕಾರಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಲಾಗಿದೆ. ಈ ಸ್ತಂಭ ಚೌಕಾಕಾರವಾಗಿದ್ದು ಅಷ್ಟಕೋನಾಕೃತಿಯಲ್ಲಿಯೂ


(ಪುಟ 13ಕ್ಕೆ)

# ಕಲಾಸಾಧನೆಯ ಹಾದಿಯಲ್ಲಿ..... 75 ವರ್ಷಗಳು

ಕಳೆದ ಜೂನ್ 17, 2000ದಂದು ಧಾತು ಶಿಲ್ಪಕಾರ ಕಲಾವಿದ ಶ್ರೀ ನಾಗೇಶ್ ಬೀಮರಾವ್ ಸಾಬಣ್ಣವರ ಇವರಿಗೆ 75 ವರ್ಷಗಳು ತುಂಬಿದ ಸಂದರ್ಭದಲ್ಲಿ ಅವರ ಶಿಷ್ಯರೂ, ಸ್ವತಃ ಉತ್ತಮ ಕಲಾವಿದರೂ ಆದ ಅನೇಕ ಗಣ್ಯರು ಕೂಡಿಕೊಂಡು ಮುಂಬಯಿಯ ಹೆಸರಾಂತ ಕಲಾಶಾಲೆ ಜೆ.ಜೆ. ಸ್ಕೂಲ್ ಆಫ್ ಅಪ್ಲೈಡ್ ಆರ್ಟ್ಸ್‌ನಲ್ಲಿ ಒಂದು ಸನ್ಮಾನ ಸಮಾರಂಭ ಏರ್ಪಡಿಸಿಕೊಂಡಿದ್ದರು. ಈ ಸಮಾರಂಭದಲ್ಲಿ ಸಾಬಣ್ಣವರ ಅವರ ಗುರುಗಳೂ, ಹೆಸರಾಂತ ಚಿತ್ರಕಾರರೂ ಆದ ಶ್ರೀ ಮಾಧವರಾವ್ ಸಾತ್‌ವಲೇಕರ್ ಇವರು ಶಾಲು ಹೊದಿಸಿ, ಮಾನಪತ್ರಕೊಟ್ಟು ಗೌರವಿಸಿದರು. ಹೆಸರಾಂತ ಶಿಲ್ಪಕಾರ ಶ್ರೀ ಎನ್. ಎಲ್. ಸೋನವಡೇಕರ್, ಸರ್ ಜೆ.ಜೆ. ಇನ್‌ಸ್ಟಿಟ್ಯೂಟ್‌ನ ಆಫ್ ಅಪ್ಲೈಡ್ ಆರ್ಟ್‌ನ ಡೀನ್ ಪ್ರೊ. M.G. ರಾಜಾಧ್ಯಕ್ಷ, ಚಿತ್ರಕಾರ ಹಾಗೂ ಮೈಸೂರಿನ CAVAದ ಡೀನ್ ಪ್ರೊ. V.M. ಸೋಲಾಪುರ್‌ಕರ್, ಮಹಾರಾಷ್ಟ್ರ ರಾಜ್ಯ ಕಲಾವಿಭಾಗದ ಮಾಜಿ ನಿರ್ದೇಶಕ ಪ್ರೊ. ಮಾಧವ್ ಸಾತ್‌ವಲೇಕರ್, ಸರ್ ಜೆ. ಜೆ. ಸ್ಕೂಲ್ ಆಫ್ ಆರ್ಟ್‌ನ ಮಾಜಿ ಡೀನ್ ಪ್ರೊ. ಪಿ.ವಿ. ಧೋಂಡ್, ಮುಂಬೈಯ ಮಾಜಿ ಕಮಿಶನರ್ ಶ್ರೀ ಎಸ್. ಎಸ್. ತಿನಯಿಕರ್, ನಾಟ್ಯಗುರು ಶ್ರೀ ಪಾರ್ವತಿಕುಮಾರ್ ಮುಂತಾದ ಅನೇಕ ಗಣ್ಯ ವ್ಯಕ್ತಿಗಳು ಈ ಸಮಾರಂಭದಲ್ಲಿ ಭಾಗವಹಿಸಿ ಸಾಬಣ್ಣವರ ಕೆಲಸ ಮಾಡುವ ವೈಖರಿ, ಕೈಬೆರಳುಗಳ ನೈಪುಣ್ಯ, ಸೂಕ್ಷ್ಮ ದೃಷ್ಟಿ, ತನ್ಮಯತೆ, ಏಕಾಗ್ರತೆ, ತಮ್ಮ ವಿದ್ಯಾರ್ಥಿಗಳನ್ನು ಬೆಳೆಸುವ ರೀತಿ ಇವುಗಳೆಲ್ಲವನ್ನೂ ಅವರು ಕಲಾಪ್ರಾವೀಣ್ಯತೆಯ ಉತ್ತುಂಗ ಶ್ರೇಣಿಯ ಬಗ್ಗೆ ಕೊಂಡಾಡಿ ಹರಸಿದರು.




*ಪ್ರೊ. ನಾಗೇಶ್ ಭೀಮರಾವ್ ಸಾಬಣ್ಣವರಿಗೆ ಸನ್ಮಾನ.*



*ಬೆಳಗಾವಿ ಜಿಲ್ಲೆಯ ಶಿರಸಂಗಿಯಲ್ಲಿರುವ ಮಹಾಕಾಳಿ ದೇವಿಯ ಮೂರ್ತಿಯ ಲೋಹದ ಪ್ರಕೃತಿ*

ಈ ಸನ್ಮಾನ ಸಮಾರಂಭದಲ್ಲಿ ಬಿಡುಗಡೆಗೊಳಿಸಿದ ಸ್ಮರಣ ಸಂಚಿಕೆಯಲ್ಲಿ ಬರೆದಿರುವಂತೆ "ನಮ್ಮ ದೇಶದಲ್ಲಿ ಅನೇಕ ಬಗೆಯ ಪ್ರಾಚೀನ ಕಲೆಗಳು ಪಾರಂಪರಿಕವಾಗಿ ವಿಕಸನಗೊಂಡು ಬೆಳೆದು ಬಂದಿದ್ದರೂ, ಈಗಿನ ಯಾಂತ್ರಿಕ ಜೀವನದಲ್ಲಿ ಅವು ತಮ್ಮ ಸ್ಥಾನವನ್ನು ಕಳೆದುಕೊಳ್ಳುತ್ತಿವೆ. ಈ ಎಲ್ಲ ಕಲೆಗಳಲ್ಲೂ ಧಾತುವಿನ ತಗಡಿನ ಮೇಲೆ ಅಚ್ಚೊತ್ತಿದಂತೆ ಉಬ್ಬು ಚಿತ್ರಗಳನ್ನು ಮೂಡಿಸುವುದು ಬಹಳ ಕಠಿಣವಾದದ್ದು. ಅತ್ಯಂತ ಸೂಕ್ಷ್ಮ ಹಾಗೂ ಶ್ರಮದಾಯಕವಾದ ಈ ಕಲೆಯನ್ನು ಅಭ್ಯಸಿಸುವವರೂ, ಸಾಧಿಸುವವರೂ ಬಹಳ ಕಡಿಮೆ. ಹೀಗಿದ್ದರೂ, ಸರ್ ಜೆ.ಜೆ. ಸ್ಕೂಲ್ ಆಫ್ ಆರ್ಟ್‌ನ ಅಧಿಪತಿಗಳು ಈ ಕಲೆಯನ್ನು ಒಂದು ಮುಖ್ಯ ಪ್ರಕಾರವೆಂದು ಗಣಿಸಿ ಅದರ ಪುನರುತ್ಥಾನಕ್ಕೆ ಅವಕಾಶ ಮಾಡಿಕೊಟ್ಟಿದ್ದರಿಂದ ಅನೇಕ ಗಣ್ಯರು ಈ ಕಲೆಯನ್ನು ಕಲಿಸುವುದಕ್ಕೂ ಸಾಧಿಸುವುದಕ್ಕೂ ಅವಕಾಶವಾಯ್ತು. ಪ್ರೊ. ನಾಗೇಶ್ ಸಾಬಣ್ಣವರ ಅವರ ಪ್ರದೀರ್ಘ ಹಾಗೂ ಏಕಾಗ್ರ ಸಹಕಾರ್ಯದಿಂದಾಗಿ ಇಂದು ಅವರ ಹೆಸರು ಈ ಕಲೆಯಲ್ಲಿ ಒಂದು ಅತ್ಯುಚ್ಚ ಮಾನದಂಡದಾಗಿ ಪರಿಣಮಿಸಿದೆ. ಮತ್ತು ನಮ್ಮ ರಾಷ್ಟ್ರೀಯ ಸರಕಾರದ ಟಂಕ ಸಾಲೆಯ ನಾಣ್ಯಕಲೆಯನ್ನು ಸಮೃದ್ಧಿಗೊಳಿಸಿದೆ."

ಇಂಥ ಒಬ್ಬ ಅಪೂರ್ವ ಕಲಾಕಾರ ನಮ್ಮೆಲ್ಲರ ನಡುವೆ ಮುಂಬೈಯಲ್ಲಿರುವುದು ಹಾಗೂ ಅವರು ಕನ್ನಡಿಗರಾಗಿರುವುದು ನಮಗೆಲ್ಲಾ ಒಂದು ಹೆಮ್ಮೆಯ ವಿಷಯ. ಇವರೂ ಇವರ ಪತ್ನಿ ಸುಮನ್ ಸಾಬಣ್ಣವರ ಅವರೂ ನಮ್ಮ ಮೈಸೂರು ಅಸೋಸಿಯೇಶನ್‌ನ ಆಜೀವ ಸದಸ್ಯರಾಗಿರುವುದು. ನಿಜಕ್ಕೂ ತುಂಬಾ ಸಂತೋಷವನ್ನುಂಟು ಮಾಡುತ್ತದೆ. ಇವರ ಕಲಾವಂತಿಕೆ ಇವರಿಗೆ ಪಾರಂಪಾರಿಕವಾಗಿ ಬಂದ ಬಳುವಳಿ. ತಂದೆ, ದೊಡ್ಡಪ್ಪ, ಸೋದರ ಮಾವಂದಿರು, ಅವರ ಹಿರಿಯರು ಎಲ್ಲಾ ಕಲ್ಲು, ಲೋಹ ಹಾಗೂ ಇತರ ಪ್ರಕಾರಗಳ ಅತ್ಯುತ್ತಮ ಶಿಲ್ಪಕಾರರಾಗಿದ್ದರು. ರಾಜಾಶ್ರಯವನ್ನು ರಾಜಸನ್ಮಾನವನ್ನೂ ಪಡೆದಿದ್ದರು. ಇಂದಿನ ಮೈಸೂರು ಅರಮನೆಯಲ್ಲಿರುವ ಸ್ವರ್ಣಸಿಂಹಾಸನದ ಕರ್ತೃ ಇವರು ಪೂರ್ವಜರಾದ ಶ್ರೀ ಪಾರಂಪಾರಿಕವಾಗಿ ಬಂದ ಕಲೆಯನ್ನು ಶಿಕ್ಷಣ ಮಾಧ್ಯಮದ ಮೂಲಕ ಊರ್ಜಿತಗೊಳಿಸಿ ಒಂದು ಅಭ್ಯಾಸಕ್ರಮವಾಗಿ ಶಾಸ್ತ್ರೀಯವಾಗಿ ಬೆಳೆಸಿ ವೈಜ್ಞಾನಿಕ ನೆಲೆಗಟ್ಟನ್ನು ದೊರಕಿಸಿಗೊಟ್ಟ ಹೆಚ್ಚಳಿಕೆ ಅವರಿಗೆ ಸಲ್ಲಬೇಕು.

ಇವರು ತಮ್ಮ 18ನೆಯ ವಯಸ್ಸಿನಲ್ಲಿ ದೇಶಾದ್ಯಂತ ಹರಡಿದ್ದ ಸಂಗ್ರಾಮದಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಚಟುವಟಿಕೆಯಲ್ಲಿ ತೊಡಗಿದ್ದು, ಪೋಲೀಸರ ಕಣ್ಣು ತಪ್ಪಿಸಲು ಮುಂಬೈಗೆ

## GLIMPSES OF PROF. SABANNAWAR'S PROMINENT PROJECTS.

1. Silver trophy for Mumbai Rajya Natya Mahotsava.
2. Silver plaque for presenting to Dr. Keskar, ex-minister, Govt. of India.
3. Dial for the big wall clock for Khadakwasla Military Academy, Pune.
4. Village improvement challenge shields for the Govt. of Mumbai.
5. Silver shield for Govt. of Mumbai, Agriculture Department.
6. Five foot Dia. Round bronze plaque for Mumbai Schools Sports Association.
7. Mementoes for the Directorate of Tourism, Govt. of Maharashtra.
8. Medal for the award to the literary personnel in Marathi literature.
9. Medal for the award to the prize winners in the Maharashtra State Art Exhibitions.
10. Silver and bronze round plaques for the awards of village development scheme on the occasion of Birth Centinary celebration of Mahatma Gandhi (1969-70)
11. Mumbai Rose Society Trophy (Silver)
12. A memento for "Maharashtra Rajya Kala Pradarshan Roupya Mahotsavi Warsh" 1984-85 (Bronze).
13. Replica of "Meghadambari" at Raigad (Bronze).

**Designed and Modelled**

1. Silver Jubilee Celebration Coins – 1972. (Master Model) for India Govt. Mint.
2. Grow More Food – Coins (Designed, Modelled and Master Model) for India Govt. Mint.
3. Equality – Development – Peace Coin (Designed, Modelled and Master Model) (International Women's Year – 1975) for India Govt. Mint.
4. Agricultural–Oriented Coin for Govt. of Bhutan on the eve of coronation of Maharaja of Bhutan (Designed, Modelled and Master Model) for India Govt. Mint.
5. Development-oriented Coin for Govt. of Bhutan (Designed, Modelled and Master Model) (International Women's Year-1975) for India Govt. Mint.
6. Memento (trophy) for Directorate of Sports and Youth Services Govt. of Maharashtra (Designed, Modelled and Master Model)
7. Trophy for Mumbai Arts and Sports Association Mumbai.
8. Prepared Mementos for Trade Fair Authority of India, New Delhi in 1981.
9. Prepared a Roving Trophy for "Nehru Centre" (40 cms in height) in 1983.
10. The plaques of Dr. Homi Bhabha for B.A.R.C. Mumbai (on the occasion of silver jubilee) in 1983.
11. Prepared the design for Maharashtra Rajya Kala Pradarshan-Silver Jubilee Celebration-1985.
12. Prepared the design for Memento-Karnataka Rajyotsava Award and executed the mementoes-1985.
13. Prepared the design for the Memento and Coin to commemorate the Centenery Celebration of The Directorate of Archaeology and Musuems, Karnataka Government and executed the mementoes and coins-1985
14. Designed and prepared Model figures (two in Indian style) for Hotel Peninsula-Madras (final figures in cement fit 17' each on the façade of the hotel under personal guidance). Executed mementoes in miniature size in metal.
15. Designed Maharashtra Gaurav Puraskar memento for Govt. of Maharashtra-1990.

Others :

1. Invited to deliver a talk on metal crafts and display organised by All India Handicrafts Board in Mumbai in 1968.
2. Invited as an adviser on the Design Development Committee created by all India Khadi Gramodyog Commission.
3. A member of the Committee appointed by the Govt. of India and Gems & Jewellery export Promotion Council to draft the syllabus for proposed full-fledged jewellery course.

ಓಡಿ ಬಂದು ಏನೆಲ್ಲಾ ಬವಣೆ ಅನುಭವಿಸಿ ಮೂರು ವರ್ಷಗಳ ಕಷ್ಟ ಜೀವನದಲ್ಲೂ ಜೆ. ಜೆ. ಸ್ಕೂಲ್ ಆಫ್ ಆರ್ಟ್‌ನಿಂದ ಡಿಪ್ಲೊಮಾ ಪಡೆದರು. ಅದೂ ಪ್ರಥಮ ಶ್ರೇಣಿಯಲ್ಲಿ ಮುಂದೆ ಅದೇ ಸಂಸ್ಥೆಯಲ್ಲಿ 35 ವರ್ಷ ದುಡಿದು ನಿವೃತ್ತರಾದರು. ಆಗಿನ ಕಾಲದಲ್ಲಿ ಅವರ ಮನೆಯೇ ಒಂದು ಗುರುಕುಲವಾಗಿದ್ದು ವಿದ್ಯಾರ್ಥಿಗಳು ಮನೆಯಲ್ಲೂ ಶಾಲೆಯಲ್ಲೂ ಅವರ ಮಾರ್ಗದರ್ಶನವನ್ನೂ ಒಂದೇ ರೀತಿಯಲ್ಲಿ ಪಡೆಯುತ್ತ ಸಾತತ್ಯವಾಗಿ ಅಭ್ಯಾಸವನ್ನು ಮುಂದುವರೆಸುವುದಲ್ಲದೆ ಅವರ ವಿಶೇಷ ಅನುಗ್ರಹಗಳಿಗೂ ಪಾತ್ರರಾಗುತ್ತಿದ್ದರು. ಇಷ್ಟು ವರ್ಷಗಳು ಕಳೆದರೂ ಅವರ ಜೀವನ ಕ್ರಮದಲ್ಲೇನೂ ಮಾರ್ಪಾಡಿಲ್ಲ. ಇಂದಿಗೂ ಅವರು ಅದೇ ರೀತಿ ಕೆಲಸ ಮಾಡುತ್ತಲೇ ಇರುತ್ತಾರೆ. ತಮ್ಮಲ್ಲಿಗೆ ಬಂದವರಿಗೆ ಮಾರ್ಗದರ್ಶನ ಮಾಡುತ್ತಲೇ ಇರುತ್ತಾರೆ.

ಕೆಲವು ವರ್ಷಗಳ ಹಿಂದೆ ನಿಧನರಾದ ಹೆಸರಾಂತ ಚಿತ್ರಕಾರ S.M. ಪಂಡಿತರಿಗೂ ಇವರಿಗೂ ಭಾರೀ ಗೆಳೆತನ ಪಂಡಿತರು ಅವರ ಊರಾದ ಗುಲ್ಬರ್ಗಾದಲ್ಲಿ ಒಂದು ಲಕ್ಷ್ಮೀನಾರಾಯಣನ ಗುಡಿ ಕಟ್ಟಿಸಿರುತ್ತಾರೆ. ಅದರ ಮೂಲ ಕೃತಿಯನ್ನು ಅವರು ಅಲ್ಲೇ ಮಾಡಿಸಿದರೂ ಅದನ್ನು ಪರಿಷ್ಕರಿಸಲು ಸಾಬಣ್ಣವರ ಅವರನ್ನು ಕೇಳಿಕೊಂಡರು. ಮುಂದೆ ಆ ಮೂಲ ದೇವರ ಶಿಲ್ಪ ಇಷ್ಟರ ಮಟ್ಟಿಗೆ ಮಾರ್ಪಾಡುಗೊಂಡಿತೆಂದರೆ ಮೊದಲಿದ್ದುದಕ್ಕೂ ಇದಕ್ಕೂ ಯಾವುದೇ ಹೋಲಿಕೆ ಉಳಿಯಲಿಲ್ಲ. ಬಹಳ ಸುಂದರವಾಗಿ ಮೂಡಿ ಬಂದ ಕೃತಿ ಇಂದು ಗುಡಿಯಲ್ಲಿ ಪೂಜೆಗೊಳ್ಳುತ್ತಿದೆ.

ಇದೇ ರೀತಿ ನಾಟ್ಯಾಚಾರ್ಯ ಶ್ರೀ ಪಾರ್ವತಿಕುಮಾರ್ ಸಹ ತಮ್ಮ ಊರಲ್ಲಿ ಲಕ್ಷ್ಮೀದೇವಿಯ ಗುಡಿಗಾಗಿ ಮೂಲ ಮೂರ್ತಿಯಲ್ಲಿ ಸಾಬಣ್ಣವರ ಅವರಿಂದಲೇ ಮಾಡಿಸಿಕೊಂಡಿದ್ದಾರೆ. ನೋಡಿದವರಿಗೆ ಸಾಕ್ಷಾತ್ ದೇವಿ ಅಲ್ಲಿ ಬಂದು ನೆಲೆಸಿರುವಂತೆ ಭಾಸವಾಗುತ್ತದೆಂದು ಪ್ರತೀತಿ.

ಗಣೇಶ ಇವರ ಅಚ್ಚುಮೆಚ್ಚಿನ ದೇವರು ಗಣೇಶ ರೂಪವನ್ನು ಅನೇಕಾನೇಕ ಮಾಧ್ಯಮಗಳಲ್ಲೂ, ಅನೇಕ ರೂಪದಲ್ಲೂ ಬಿಡಿಸಿರುತ್ತಾರೆ. ಕಲ್ಲಿನಲ್ಲಿ, ಲೋಹದಲ್ಲಿ, ಪ್ಲಾಸ್ಟರ್ ಆಫ್ ಪ್ಯಾರಿಸ್‌ನಲ್ಲಿ, ಮಣ್ಣಿನಲ್ಲಿ ನಿಂತಿರುವ ಗಣೇಶ, ಕೂತಿರುವ ಗಣೇಶ - ಬಗೆಬಗೆಯ ವಿಗ್ರಹಗಳನ್ನು ಇವರ ಮನೆಯಲ್ಲಿ ಕಾಣಬಹುದಾಗಿದೆ. ಇವರ ಮನೆಯೋ ಪುಸ್ತಕಗಳ ಭಂಡಾರವೇ ಎಲ್ಲೆಲ್ಲೂ ಪುಸ್ತಕಗಳೇ ತಮ್ಮ ಕೃತಿಗಳು ಶಾಸ್ತ್ರಾಧಾರವಾಗಿರಬೇಕೆಂದು ವೇದೋಪನಿಷತ್ತು


## ಸಾಬಣ್ಣವರ ಕೆಲವು ಕಲಾಕೃತಿಗಳು



**GANAPATI**
130 x 190 mm - Brass (Oxidised)



**VASE**
Copper with Wooden Padastal



**FLYING CELESTIALS** - Copper Repousse 1963



**KIRTI MUKH (Repousse) 200 x 640 mm Copper**

ಗಳನ್ನು ಇತರ ಶಾಸ್ತ್ರಗ್ರಂಥಗಳನ್ನೂ, ಪಾಶ್ಚಾತ್ಯ ಸಾಹಿತ್ಯವನ್ನೂ ತಾವೇ ಸ್ವತಿಂಕೆಯಿಂದ ಅಭ್ಯಾಸ ಮಾಡಿರುತ್ತಾರೆ.

1988ರಲ್ಲಿ ಮೈಸೂರು ಅಸೋಸಿಯೇಶನ್ನಿನ ಕಲಾವಿಭಾಗ ಬೆಂಗಳೂರಿನ ಲಲಿತ ಕಲಾ ಅಕಾಡೆಮಿಯ ಭವನದಲ್ಲಿ ಮುಂಬೈನ ಕನ್ನಡ ಕಲಾವಿದರ ಕೃತಿಗಳ ಪ್ರದರ್ಶನವನ್ನು ಆಯೋಜಿಸಿತ್ತು. ಪ್ರೊ. ಸಾಬಣ್ಣವರ ಅವರು ತಮ್ಮ ಕೃತಿಗಳನ್ನು ಸಂತೋಷದಿಂದ ಈ ಪ್ರದರ್ಶನಕ್ಕಾಗಿ ಇತ್ತುದಲ್ಲದೆ ಶ್ರೀ ಎಸ್. ಎಂ. ಪಂಡಿತರಿಂದಲೂ ಕೃತಿಗಳನ್ನು ಕೊಡಿಸಿದ್ದುದನ್ನು ಮರೆಯುವಂತೆಯೇ ಇಲ್ಲ. ಇವರು ಸ್ವಭಾವತಃ ಎಂದೂ ಎಲೆಯ ಮರೆಯ ಕಾಯಿಯಂತೆ ನಾಚಿ ಮುದುರಿಕೊಂಡೇ ಇರುವವರಾದರೂ ಒಳ್ಳೆಯ ವಾಗ್ಮಿ. ಆಧಾರ ಸಹಿತವಾಗಿ ಸ್ಪಷ್ಟವಾಗಿ ಮಾತಾಡುವವರಲ್ಲದೆ ಎಂದಿಗೂ ಇನ್ನೊಬ್ಬರ ಒತ್ತಡಕ್ಕೆ ಬಾಗುವವರಲ್ಲ. ಆದರೆ ಅತ್ಯಂತ ಸ್ನೇಹಶೀಲರು, ಮತ್ತು ಮೃದು ಹೃದಯಿಗಳು.

ಪ್ರೊ. ಸಾಬಣ್ಣವರರಿಗೆ ಅನೇಕ ಪ್ರಶಸ್ತಿ, ಸನ್ಮಾನಗಳು ಸಂದಿವೆ. ಅದರಲ್ಲಿ 1984ರ ಸಾಲಿನ 'ಕರ್ನಾಟಕ ರಾಜ್ಯ ಪ್ರಶಸ್ತಿ'ಯೂ ಒಂದು.

ಪ್ರೊ. ನಾಗೇಶ್ ಭೀಮರಾವ್ ಸಾಬಣ್ಣವರರಿಗೆ 75 ವರ್ಷಗಳು ಸಂದ ಈ ಸಂದರ್ಭದಲ್ಲಿ ಮೈಸೂರು ಅಸೋಸಿಯೇಶನ್ನಿನ ಪರವಾಗಿ ನೇಸರು ಶುಭ ಹಾರೈಕೆಗಳೊಂದಿಗೆ ಅಭಿನಂದಿಸುತ್ತದೆ.

### CERTIFICATE & DIPLOMA COURSE IN KANNADA

The University of Mumbai, Department of Kannada offers the Certificate and Diploma Course in Kannada (Part-time, One year) Classes which will commence from Saturday, 5th August 2000.

Prescribed forms of application & Syllabus are to be obtained from the University Department of Kannada.

Applications should reach the Head, Univ. Dept. of Kannada on or before 2nd August 2000. Further details can be had from the office of the Univ. Dept. of Kannada, Vidyanagari, Mumbai-400098. (6526091) Extn. 469 & 345), Karnataka Sangha Dombivili (911-455833) Karnataka Sangha Navi Mumbai (7654343)

**-- T. Vasanthkumar**
Head, Univ. Dept. of Kannada

# IMPROVING VALUE SYSTEMS

**Excerpts drawn from lecturers and discussions of Kulapathi Shri M.G. Vidyasimhacharya**
**Reproduced from the Commemorative Volume of Indian merchants' Chamber, with their kind courtesy**

*Kulapathi Shri MG. Vidyasimhacharya heads the "Sathyadhyana Peeta" a vedic gurukula at Mulund in Mumbai. The gurukula – perhaps one of its kind in Mumbai – has over 150 students hailing from all parts of India. Apart from teaching vedic texts, the gurukula teaches western literature, philosophy, religion, computers and many other subjects of interest. It is equipped with a library having over one lakh books, covering the western as well as oriental philosophies and a wide range of other subjects.*

*Shri Vidyasimhacharya has authored many scholarly publications.*

## Introduction

Normative Sciences and natural Sciences are different because the former talks of what is to be done and the latter of 'what is'. Thus ethics, values, norms and Normative science go back to the root of the vedic shastras. While each human being needs a value system for proper living of one's life, it calls for superhuman efforts to arrive at a value system. One has to go beyond the common barriers faced by ordinary human beings to reach a level of spiritual understanding so as to be able to evaluate.

One cannot be totally objective and impartial while evaluating oneself or evaluating someone related to us. When it comes to evaluating someone unrelated to us, some stance of objectivity can be maintained. Usually our evaluation is coloured by our own emotions, inhibitions etc. and we tend to justify it. The justification is based on and draws from norms and ethical values and springs from 'Asmita, mamta and ahankara' which can be interpreted as self-esteem, self-love and self-respect. Hence the satva, rajas and tamas gunas surface and are bound by these forces. Ahankara is beautiful concept which gives a basis for existence and survival and is necessary in this world. In the Bhagawad Gita, Arjuna asks Shri Krishna as to how, when the mental faculties are bound by these forces can we evaluate and elevate oneself?

In answer to Arjuna, Shri Krishna says that things are agreeable or disagreeable in the world depending upon your point of view and whether they make you happy. There is no absoluteness about them as they depend on the point of time of review and is a relative experience. Nothing can remain agreeable eternally in this world nor is anything absolutely disagreeable in this world. Even illness is welcome and agreeable to some when they want to avoid certain things or when they want to be a source of attraction or cynosure in public eyes. Though there is a loss and pain it is welcome at that point. Colours change. Today's friends become Tomorrow's foes and vice a versa because there is a change in the feeling for and need of each other. Whereas the sages are "Gunateeta" they belong to a different mettle altogether who neither hate nor love, are indifferent to losses and gains and are not attached to any thing but to a common fountain of bliss seeing it as God's creation of the world.

Ordinary people cannot reach this status just as a house fly can only fly to a certain height but not soar like the eagle. Attempts to cleanse oneself is possible and while you cannot avoid or eliminate 'ahankaara' and 'mamakaara' completely it must be kept at tolerable levels. Currently 'ahankara' has reached unbearable levels and each wants to demonstrate his smartness and use every occasion to outsmart, outwit and outbeat the other in communication, action and association. This has an anti-social flavor calling for totally impartial introspection which is not possible as long as it is coloured with the forces of attachment. Objective assessment of oneself, subjective experiencing and the combination of these two while judging anyone related to or unrelated to oneself, calls for a value system or measuring rod which is unchanging and must therefore be rooted in the scriptures.

With respect to known and unknown things there are four dimensions : Something which is not known to us about ourselves and is also not known to others.

Something which is known to us but not disclosed to others. Something which is not known to us but known by others. Something which is known to us and also known to others.

This gap of knowledge leads to the struggle of a person who inspite of knowing he is imperfect wants to show that he is perfect. The gap between the two can be assessed through the knowledge of the Shastras-what you are and what you should be A person successfully bridges this imperfection through the value system.

The shastras provide a certain apparatus which ensures success in the unfoldment of one's personality. I am purposely not using the phrase "Personality Development" as it is hackneyed and is an add-on approach. I use the word "Unfoldment" of personality deliberately and advisedly because "you are what you want to be" – only it is latent, not unfolded as there are layers covering it. Vedic Seers differentiate this encapsulated growth from the other stream of thought involving gains and losses. Therefore a cleansing process is involved which is one step and goes hand in hand with the unfoldment of the personality which is another step.

## THE CURRENT PROBLEM

Single minded yearning for material wealth has become a part of modern life. This ambition and outlook has repercussions on people's lives, values and attitudes. Hence there is a general lament about the lack of ethical values and the existence of a corrupt society. Mass campaigns by the government or by the people are not adequate to make

permanent impressions or rectification.

Mere teaching of moralistic platitudes at the school level is not enough and must be supported with practical steps and monitoring. Unless the perspective is a core value of keeping the material world in its place, in the Indian context it is difficult to bring about a revolution in revaluation. Corruption breeds itself with a demonstrative effect.

Two things are needed for revolution in the system. Young blood and an aged brain. Unfortunately, today the aged have begun accepting the system or at worst they stand apart and watch. The youngsters will not revolt as they are born into the system, mothered by it and nursed by it. Hence they do not find something unethical, immoral or amoral in what is happening around.

Nevertheless, there are people who do not bother about material wealth nor are they gluttonous about consumption and greedy about acquisition. Such people must come to the forefront prescribe, preach and practice, which will enable other people to accept the proper way of life. If there are people of caliber and capability as also high integrity they will be followed by others because honest values are always respected more than notoriety however bad the times. It is sad that those who have gone into the vicious circle of corruption have gone far away in a direction which seems irretrievable.

## THE PROCESS OF IMPROVING VALUE SYSTEMS

A one to one approach, between father and son, friend and friend, brother and siblings, teacher and student, business partner to business partner must be engineered and encouraged at every layer, and in every interface. Through this personalised process a role model is created, There is then the possibility of this model having a hundred followers and thus spreading this value system with a multiplier effect.

There is only one way and that is to have a practicable model of precepts followed by thousand good people in order to achieve a betterment in the value system and improvement. It is time to give more importance to ethics, religion and the shrine of these two are the scriptures. We should not only highlight the divine things beyond human understanding but bring down to a common level of understanding humanly possible practical morality.

A group should be formed of devoted people, dedicated, sincere, honest, loyal to the cause to come together and take up the responsibility and give momentum to a natural movement. The movement of improving the value systems can begin with the getting together of say even ten senior citizens who may be great orators/writers. They need not be from the religious field but who can write continuously so as to hammer these ideals into the minds of teenagers, youngsters as well as grown-ups. This is a great necessity. Such people, when they work amidst society through lectures, time and again will generate awareness in the community leading to an awakening from deep slumber.

The path of honesty, trust, respect, compassion, affection and love is attractive to youngsters. These values should be demonstrated through the help of a model which can begin as a small movement. Honest enquiring minds are the basis for wholesome change. Swami Vivekananda said. "If I am given a hundred Nachiketas, I shall change the whole world"

## STRATEGIES FOR IMPROVING VALUE SYSTEMS

It is important that the dictum "spare the rod and spoil the child" be invoked again and again. Punishment is an important means of nipping in the bud and controlling the juggernaut of destruction. Today nobody likes to control youngsters. Right from their infancy, childhood and adolescent stages. they are given rein and full freedom to think, say and act what they want.

In order to prevent children from sinking into the quicksand of the system, a few senior citizens must get together and act immediately.

There are models of honest citizens who try to fight the system of corruption, unfair practices etc. But, quite often, they start fighting against people in authority just to achieve cheap fame and become popular. They are heard no more. Instead, the moral campaigns by these citizens must be aimed at youngsters.

There should be a tremendous spate of literature propagating universal morality and Theism. God is a necessary part of existence and proper value system. Only after this comes rituals and religion.

It is necessary to rebel, revolt, retaliate, react to a valueless situation not merely with words which are not so important but through emotions. At home, grand parents can create a mental impression through the medium of various tales and stories at an impressionable age for the children. This is better than religious fanaticism or blind following of doctrinaire methods.

The media should try to overcome cynicism and despair in adolescents and replace it with exemplary moral lessons to inculcate dignity. The Ramayana Episodes need not be cinematised in a dramatic manner but the lessons can be depicted in a serious sophisticated and dignified manner so as to mold innocent young minds and create interdependent thinking and affection for society. Media is highly acceptable to youngsters. Journalists and opinion makers are responsible for formulating 90% of the thinking. Hence they have grave responsibility to rectify the situation without making it a sensational marketing strategy for propagating money, fame and power as virtues.

Instead of rituals, honesty and ethics should guide the behavior of youth, inculcate respect for elders and mold their reaction to money and people. "Niti" is the only way in which this can be described so as to generate respect, honesty and duty.

"Each One Help One" should be the motto where whatever the situation you are placed in, you will apart from your family, help one other person to do his best – a doctor, a lawyer, a teacher or any other professional or an ordinary citizen will begin thus and instill in someone else or another youngster through reasoning, through affection, through argument or a mix of these,

value based insights and conviction. Good people must make persistent efforts to reform the system instead of exhibiting helplessness, Big campaigns must be planned along the lines of invasions - an invasion of morality.

What then of those children who are latchkey children and have to face abuse because of naivet..., because they are shy and ashamed, innocent and ignorant ? The argument to become streetsmart and show one-upmanship is very strong in today's worled of competitive deception. The answer can be that selflessness is a strong antidote and can work wonders if each person tries to clean up himself, his children and the society around him, his home and environment. Thereafter para-professionals can play a major role in the revolution by tacking the other sections.

### WOMEN

Women's role in looking after children and inculcating 'samskara' is crucial since they have affinity, intimacy and proximity to their progeny. This is not to deprive them of independence but we must insist on morality and upliftment which can only occur when children are brought up well.

Any via media proposals are acceptable which can help harness the talents of women as long as children are not neglected but know the value of love, affection and intimacy. Indeed, a word may be said about today's parenting techniques where children are allowed to ask untimely questions persistently and without end. All questions cannot be answered in a logical manner through reason at an early stage. Some things have to be accepted, there should be an etiquette and children should be guided by traditional means however brilliant they are. They should be prevented from asking perverted questions if this value revolution must start from the hearth and heart.

### MEDIA

It would not be far from the truth if some of the blame is laid at the doors of the media for deterioration of ethical values which has degenerated since two or three decades. The media has a grave responsibility in creating public opinion be it the TV, the Radio, Daily Press, the Magazines or any other form of print or electronic communication. They must not only emphasize morality but also show good themes and highlight what is relevant.

Under the garb of information dissemination showing bad themes only serves to disseminate more on how to perpetrate and perpetuate bad things further as people accept them easily. Secondly, continuous barrage of negative information also immunises people so that the pain is not felt as deep as it ought to be felt. Since media shapes and forms opinions, they should not shirk their responsibility but, according to each human social environment, popularise those respective issues that help achieve serenity. For example, a feature film or TV serial can propagate great ideals without distraction and without emphasis on the evil-side of man. However, today, even those serials which deal with mythological, divine or yet religious themes are dramatised and marketed in a manner to the community, which will help generate money for the producer and the evil influences are given a go by.

### THE MODEL OF PERPETUATING VALUE SYSTEMS




The starting point is demonstration effect – that is seeing what others do and how they are – this leads to discontentment which along with the need for material amenities and wealth can give rise to greed and ambition to make easy money. When this is buttressed by the media's negative dissemination showing the glory of acquisition, fear of evil is thrown overboard. How easy it is then to yield to small temptations? This has a pervasive impact on the rest of the society, giving root to bad and corrupt leadership, reinforcing the demonstration effect. The vicious circle of corruption starts all over again and spirals to a higher platform.

One however need not lose heart because in the very circularity is embedded a corrective element and the virtuous circle can also operate. If given a proper push a value system rooted in the scriptures starts with belief in God. This is engendered by educating the young and inculcating moral and ethical values by dedicated senior citizens.




It will help to spread contentment and a one to one interface at all levels will through the role model instill fear of evil which is the best way to overcome temptations. This has a pervasive impact and brings about good honest leadership which while enjoining importance of value springing from scriptures, deepens and spreads belief in God, enabling the virtuous circle to function vigorously in a spiral leading to a stronger and improved value system.

### CONCLUSION

Even in the previous generations there were ups and downs in established value systems but since it was very difficult to amass wealth it had some respect. Today easy money has become so rampant, and there are many easy ways to get money in terms of crores of rupees either through speculation, films, sports or politics. Disproportionate gains to the effort put in, has led to this situation. A work ethos has to be instilled

*(contd. on page 13)*

# ಸುಗಮ ಸಂಗೀತ ಕಲಾವಿದರೊಂದಿಗೆ ಒಂದು ಸಂದರ್ಶನ

ಜೂನ್ 10ರಂದು ಸಂಜೆ ನಡೆದ ಸುಗಮ ಸಂಗೀತ ಕಾರ್ಯಕ್ರಮದ ಕಲಾವಿದರಾದ ವೈ. ಕೆ. ಮುದ್ದುಕೃಷ್ಣ, ರತ್ನಮಾಲ ಪ್ರಕಾಶ್, ರಾಜು ಅನಂತಸ್ವಾಮಿ ಹಾಗೂ ಮಾಲತಿಶರ್ಮ ಅವರನ್ನು 'ನೇಸರು'ವಿಗಾಗಿ ಸಂಪರ್ಕಿಸಿದಾಗ ಅವರ ಆಶೋತ್ತರಗಳನ್ನು ಅರಿಯಲು ಸಾಧ್ಯವಾಯಿತು.

ವೈ. ಕೆ. ಮುದ್ದು ಕೃಷ್ಣ ಈ ತಂಡದ ನಾಯಕತ್ವ ವಹಿಸಿದ್ದರು. ಇವರು ಹತ್ತು ಹಲವು ಬಗೆ ಆಸಕ್ತಿಯುಳ್ಳವರು ರಂಗಭೂಮಿ, ಸುಗಮ, ಸಂಗೀತ ಜಾನಪದ, ಸಾಂಸ್ಕೃತಿಕ ಸಂಘಟನೆ ಹೀಗೆ ವೈವಿಧ್ಯ ಪೂರ್ಣ ಅಭಿರುಚಿ ಉಳ್ಳವರು.

ವಿವಿಧ ಹಂತಗಳಲ್ಲಿ, ಆಡಳಿತಾತ್ಮಕ ಸತ್ರಗಳಲ್ಲಿ ಸೇವೆನೀಡಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿದ್ದು ಸದ್ಯ ನಿವೃತ್ತಿಹೊಂದಿ ಸುಗಮ ಸಂಗೀತಕ್ಕೆ ತಮ್ಮನ್ನು ಅರ್ಪಿಸಿಕೊಂಡಿದ್ದಾರೆ. ಸುಗಮ ಸಂಗೀತ ಕ್ಷೇತ್ರದ ದಿಗ್ಗಜ ಪಿ. ಕಾಳಿಂಗರಾವ್ ತಮ್ಮ ಸ್ಫೂರ್ತಿಯ ನೆಲೆಯೆನ್ನುವ ಇವರು ಅರ್ಥಪೂರ್ಣ 'ಧ್ವನಿ' ಸಂಸ್ಥೆಯನ್ನು ತಮ್ಮ ಸ್ನೇಹಿತ ಅಶ್ವಥ್ ರೊಡಗೂಡಿ ಹುಟ್ಟು ಹಾಕಿದ್ದಾರೆ. ಕುವೆಂಪುರವರ ವಿಶ್ವಮಾನವ ಸಂದೇಶ 'ಮನುಜ ಮತ - ವಿಶ್ವಪಥ' ದಡಿಯಲ್ಲಿ ನವೋದಯ ಕವಿಗಳಿಂದ ಆರಂಭಗೊಂಡು ಇತ್ತೀಚಿನ ಕವಿಗಳ ವೈಚಾರಿಕ ಕವನಗಳನ್ನು ಜನಮನಕ್ಕೆ ತಲುಪಿಸುತ್ತಿದ್ದಾರೆ. ಸುಮಾರು 32 ಧ್ವನಿ ಸುರುಳಿಗಳನ್ನು ನೀಡಿರುವುದರ ಜೊತೆಗೆ 'ಸುಗಮ - ಸಂಗೀತ ' ಪುಸ್ತಕದ ಮೂಲಕ ಸುಗಮ ಸಂಗೀತ ಐದು ದಶಕಗಳ ಇತಿಹಾಸವನ್ನು ದಾಖಲಿಸಿದ್ದಾರೆ. 'ಸಹಸ್ರ ಕಂಠದ ವೇದಿಕೆ' ಸಂಗೀತೋತ್ಸವಗಳು, ದಸರಾ ಉತ್ಸವ, ಕನ್ನಡ ಸಮ್ಮೇಳನಗಳು ಮುಂತಾದ ಪ್ರತಿಷ್ಠಿತ ವೇದಿಕೆಗಳಲ್ಲಿ ಯಶಸ್ವಿಯಾಗಿ ಭಾಗವಹಿಸಿರುವುದು ಇವರ ಸ್ವದೇಶದ ಸಾಧನೆ.

ಕನ್ನಡ ನಾಡಿನಾಚೆಗೂ ಕನ್ನಡಿಗರ ಒಕ್ಕೂಟದ ಆಮಂತ್ರಣದ ಮೇರೆಗೆ ಇಂಗ್ಲೆಂಡ್, ಅಮೆರಿಕಾ ದೇಶಗಳ 18 ಪ್ರಮುಖ ಕೇಂದ್ರಗಳಲ್ಲಿ ಜನಪ್ರಿಯ ಕಾರ್ಯಕ್ರಮ ನೀಡಿದ ಹಿರಿಮೆ ಇದೆ. ಅರಿಜೋನಾರಾಜ್ಯದ ಫೀನಿಕ್ಸ್ ನಗರದಲ್ಲಿ ನಡೆದ ಕನ್ನಡ ಸಮ್ಮೇಳನದಲ್ಲಿ ಕರ್ನಾಟಕ ಸರಕಾರದ ಪರವಾಗಿ ಈ ತಂಡ ಭಾಗ ವಹಿಸಿದೆ.

'ಕರೀಂ ಖಾನ್ ಪ್ರಶಸ್ತಿ' 'ಕರ್ನಾಟಕ ಕರ್ನಾಟಕ ಕಲಾ ಪ್ರಶಸ್ತಿ ' 'ಆರ್ಯ ಭಟ ರಜತ ಮಹೋತ್ಸವ ಪ್ರಶಸ್ತಿ'ಯೊಂದಿಗೆ ಅಮೇರಿಕಾದವರು ನೀಡಿದ 'ಸಾಂಸ್ಕೃತಿಕ ಸರದಾರ' 'ಜನಪದ ಮಿತ್ರ' ಎನ್ನುವ ಗೌರವನ್ನು ಪಡೆದಿದ್ದಾರೆ.

ಮುಂದಿನ ಪೀಳಿಗೆಗಾಗಿ 10ದಿನದ ಶಿಬಿರಗಳನ್ನು ಬೇರೆ ಬೇರೆ ಸ್ಥಳಗಳಲ್ಲಿ ನಡೆಸುತ್ತಿರುವ ಇವರ ಪ್ರಯತ್ನ ನಿಜಕ್ಕೂ ಸ್ತುತ್ಯಾರ್ಹ.

**ರತ್ನ ಮಾಲ ಪ್ರಕಾಶ್**

ಹಾಡು ಹಕ್ಕಿಗೆ ಬೇರೆ ಬಿರುದು ಸನ್ಮಾ....ನ !

ಎಂದು ಎಂಥ ಎತ್ತರಕ್ಕೂ ಒಯ್ಯ ಬಲ್ಲ



*ಸುಮಾ ದ್ವಾರಕಾನಾಥ್ ಅವರು ರತ್ನಮಾಲಾ ಪ್ರಕಾಶ್ ಹಾಗೂ ಮಾಲತಿ ಶರ್ಮಾ ಅವರೊಂದಿಗೆ ಸಂಭಾಷಿಸುತ್ತಿದ್ದಾರೆ.*

ವೀಣೆಯಂಥ ಮಧುರ ಧ್ವನಿಯನ್ನು ಹೊಂದಿದ ರತ್ನಮಾಲ ಪ್ರಕಾಶ್ ಮೂಲತಃ ಸಂಗೀತದ ಮನೆತನದವರು ತಂದೆ ಆರ್. ಕೆ. ಶ್ರೀಕಂಠನ್ ಸಂಗೀತ ಸಾಮ್ರಾಜ್ಯದ ದಿಗ್ಗಜ. ಶಾಸ್ತ್ರೀಯ ಸಂಗೀತದ ಕಟ್ಟನಿಂದ ಬಿಡಿಸಿಕೊಂಡು ಮುಕ್ತವಾಗಿ ಹಾಡುವ ಸುಗಮ ಸಂಗೀತದ ಕಡೆಗೆ ಇವರ ಮನಸ್ಸು ಒಲಿದುದು ಒಂದು ಅಪೂರ್ವ ತಿರುವು.

ರೇಡಿಯೋ ಸಂಗೀತವನ್ನೇ ಕೇಳುತ್ತಾ, ಅಖಿಲ ಭಾರತ ಆಕಾಶವಾಣಿ ಸಂಗೀತ ಸ್ಪರ್ಧೆಯಲ್ಲಿ ಒಟ್ಟಿಗೆ ಮೂರು ಮೊದಲ ಬಹುಮಾನಗಳು ಶಾಸ್ತ್ರೀಯ, ಅರ್ಧ ಶಾಸ್ತ್ರೀಯ, ಸುಗಮ ಸಂಗೀತ ಬಂದಾಗ ತನ್ನ ಆತ್ಮ ವಿಶ್ವಾಸ ಹೆಚ್ಚಿತ್ತು ಎನ್ನುತ್ತಾರೆ. 1976ರ ಈ ಘಟನೆ ಮೈಸೂರು ಅನಂತ ಸ್ವಾಮಿಯವರನ್ನು ಹತ್ತಿರ ತಂದಿತ್ತು. ಅವರ ಪ್ರೋತ್ಸಾಹ ಪರಿಣಾಮವೇ M.S.I.L. ಮೈಸೂರು ಮಲ್ಲಿಗೆ ಧ್ವನಿ ಸುರುಳಿಗಳು. 1988ರಲ್ಲಿ ಮಾಸ್ಕೋನಲ್ಲಿ ನಡೆದ ಭಾರತೀಯ ಉತ್ಸವದ ಸಮಾರೋಪ ಸಮಾರಂಭದಂದು Nector in stone ಕಾರ್ಯಕ್ರಮದಲ್ಲಿ ಪಂಡಿತ ರವಿಶಂಕರ್‌ರೊಂದಿಗೆ ಕಾರ್ಯಕ್ರಮ ನೀಡಿದ್ದಾರೆ. ದುಬೈನಲ್ಲಿ ಮೈಸೂರು ಅನಂತಸ್ವಾಮಿಯವರೊಂದಿಗೆ ಯಶಸ್ವೀ ಕಾರ್ಯಕ್ರಮ ನೀಡಿದ ಹಿರಿಮೆ ಈಕೆಯದು.

ಈಕೆಯ ಕಂಠಕ್ಕೆ ಮಾರು ಹೋಗಿ ಅಮೇರಿಕಾದ ಕನ್ನಡಿಗರು ವಿವಿಧ ಪ್ರದೇಶಗಳಲ್ಲಿ 45 ದಿನಗಳ ಕಾಲ ಭಾವಗೀತೆಯ ಕಾರ್ಯಕ್ರಮವನ್ನು ವೇದಿಕೆಯಲ್ಲಿ ಕೇಳಿ ಆನಂದಿಸಿದ್ದಾರೆ. ಮ್ಯಾಂಚೆಸ್ಟರ್‌ನಲ್ಲಿ ನಡೆದ ಕನ್ನಡ ಸಮ್ಮೇಳನಕ್ಕೆ ಆಹ್ವಾನಿತರಾಗಿ ಹಾಡಿ ಜನ ಮೆಚ್ಚುಗೆಯನ್ನು ಗಳಿಸಿದ್ದಾರೆ.

ಅರಿಜೋನ ರಾಜ್ಯ ಫೀನಿಕ್ಸ್ ನಗರದಲ್ಲಿ ನಡೆದ ಕನ್ನಡ ಸಮ್ಮೇಳನದಲ್ಲಿ 'ಸುಗಮ ಸಂಗೀತ' ಕಾರ್ಯಕ್ರಮವನ್ನು ಕರ್ನಾಟಕ ಸರಕಾರದ ಪರವಾಗಿ ನೀಡಿದ್ದಾರೆ. ಮತ್ತೆ ಆಗಸ್ಟ್‌ನಲ್ಲಿ ಹೂಸ್ಟನ್‌ನ ನಡೆಯಲಿರುವ ಕನ್ನಡ ಸಮ್ಮೇಳನಕ್ಕೆ ತೆರಳಲಿದ್ದಾರೆ.

**ರಾಜು ಅನಂತ ಸ್ವಾಮಿ**

ಕುರಿಗಳು ಸಾರ್ ಕುರಿಗಳು

ರಸಿಕರನ್ನು ತನ್ನದೇ ಆದ ಶೈಲಿಯಿಂದ ಮನಮುಟ್ಟುವ ರಾಜ ಅನಂತ ಸ್ವಾಮಿ ತಂದೆಯ ಆಶೋತ್ತರಗಳನ್ನು ಪೂರೈಸುವ ಭರವಸೆಯಾಗಿ ಮುಂದುವರೆದಿದ್ದಾರೆ. ರತ್ನನ ಪದಗಳನ್ನು ಸ್ಪಷ್ಟವಾಗಿ ಹಾಡಿ, ರಸಿಕರನ್ನು ರತ್ನನ ಪರಪಂಚಕ್ಕೆ ಕರೆದೊಯ್ಯುವ ಉದಯೋನ್ಮುಖ ಕಲಾವಿದ.

ತಂದೆಯ ಗರಡಿಯಲ್ಲಿ ಪಳಗಿದ ರಾಜು ಓದಿಗೆ ಕೈಮುಗಿದು ಸಂಗೀತ ಸರಸ್ವತಿಗೆ ತನ್ನನ್ನು ಅರ್ಪಿಸಿಕೊಂಡಿರುವುದು ಕನ್ನಡಿಗರ ಸೌಭಾಗ್ಯ. ತುಂಬು ಸ್ಫೂರ್ತಿಯಿಂದ ಹಾಡಿ ಸಭಾಂಗಣವನ್ನು ತನ್ನ ಮೋಡಿಯಿಂದ ಹಿಡಿದಿರುವ ರಾಜು ಒಬ್ಬ ಭರವಸೆ ನೀಡುವ ಯುವ ಪ್ರತಿಭೆ.

ತಾನು ಕಾರ್ಯಕ್ರಮ ನೀಡುವುದರಲ್ಲೇ ತೃಪ್ತನಾಗದೆ, ಬೆಂಗಳೂರು ಚಿಕ್ಕಮಗಳೂರುಗಳ

ದೂರ ಅಂತರವನ್ನು ಕ್ರಮಿಸಿ ವಿದ್ಯಾರ್ಥಿಗಳನ್ನು ತಯಾರು ಮಾಡುತ್ತಿದ್ದಾರೆ.

## ಮಾಲತಿ ಶರ್ಮ

ಯಾವ ಮೋಹನ ಮುರಳಿ ಕರೆಯಿತೋ
ದೂರತೀರಕೆ ನಿನ್ನನು'

ತಮ್ಮ ಇಂಪಾದ ಕಂಠದಿಂದ ಜನರ ಮನಸ್ಸನ್ನು ಗೆಲ್ಲಬಲ್ಲ ಮಾಲತಿಶರ್ಮ ಬೆಂಗಳೂರು ಆಕಾಶವಾಣಿಯಲ್ಲಿ ಸುಮಾರು 20 ವರ್ಷದಿಂದ ಸೇವೆ ಸಲ್ಲಿಸುತ್ತಿದ್ದಾರೆ. ನಾದಿನಿ ರತ್ನ ಮಾಲಳ ಜೊತೆಗೂಡಿದ ಮೇಲೆ ಜೋಡಿ ಹಕ್ಕಿಗಳ ಹಾಡು ಸುಗಮಸಂಗೀತದ ಪ್ರಪಂಚದಲ್ಲಿ ರೆಕ್ಕೆ ಮೂಡಿದಂತಾಗಿದೆ.

ಭಾವ ಅಭಿವ್ಯಕ್ತಿಸಲು ಭಾವಗೀತೆಯೇ ಉತ್ತಮ ಸಾಧನ ಎಂದು ದೃಢವಾಗಿ ನಂಬಿರುವ ಮಾಲತಿ, ಕಾರ್ಯಕ್ರಮಗಳನ್ನು ನೀಡುವಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ದೂರದರ್ಶನ ಹಾಗೂ ಕನ್ನಡ ಕಾರ್ಯಕ್ರಮಗಳಲ್ಲಿ ತನ್ನನ್ನು ತೊಡಗಿಸಿಕೊಂಡಿರುವ ಈಕೆಯನ್ನು ದೂರವಾಣಿಯವರೂ ಬಿಟ್ಟಿಲ್ಲ. ಸ್ಪಷ್ಟವಾಗಿ ನಿರ್ದಿಷ್ಟವಾಗಿ ಆದರೂ ಇಂಪಾಗಿ ಮಾತನಾಡುವ ಕಲೆ ಈಕೆಗೆ ಸಿದ್ಧಿಸಿರುವುದರಿಂದ ದೂರವಾಣಿ, ಕನ್ನಡ ಸಾಹಿತ್ಯಿಕ ಕಾರ್ಯಕ್ರಮಗಳಲ್ಲಿ ಕಾರ್ಯಕ್ರಮ ನಿರ್ವಹಣೆಗೆ ಈಕೆಗೇ ಮೊದಲ ಆದ್ಯತೆ.

ತನ್ನ ಇಷ್ಟೆಲ್ಲ ಕೆಲಸಗಳ ಒತ್ತಡದಲ್ಲೂ ತುಂಬ ಉತ್ಸಾಹದಿಂದ 'ಮನೆಮನೆಗೂ ಸಂಗೀತ' ಎನ್ನುವ ಹೊಸ ಯೋಜನೆಯಡಿಯಲ್ಲಿ 'ವಿಕಸನ' ಸಂಸ್ಥೆ ಹುಟ್ಟು ಹಾಕಿದ್ದಾರೆ. ಸಾರ್ವಜನಿಕ ಕಾರ್ಯಕ್ರಮಗಳನ್ನು ಕೌಟುಂಬಿಕವಾಗಿ ನೀಡಿ ಆತ್ಮೀಯ ವಾತಾವರಣದಲ್ಲಿ ಭಾವಗೀತೆಯ ಸೊಬಗನ್ನು ನೀಡುವ ವೇದಿಕೆಯನ್ನು ಸೃಷ್ಟಿಸಿದ್ದಾರೆ. ಈ ಪ್ರಯತ್ನ ನಿಜಕ್ಕೂ ಮೆಚ್ಚುವಂತಹದು.

ಹಿಂದೊಮ್ಮೆ ಬೆಂಗಳೂರಿನ ಉದ್ಯಾನವನಗಳಲ್ಲಿ ಅಂದಿನ ನಗರ ಪಾಲಿಕೆಯವರು ಪ್ರತಿ ಭಾನುವಾರ ಸಂಜೆ ಆರ್ಕೆಸ್ಟ್ರಾ ನಡೆಸುತ್ತಿದ್ದುದು ನಮ್ಮೆಲ್ಲರ ನೆನಪಿನಂಗಳದಲ್ಲಿ ಉಳಿದಿದೆ. ಮತ್ತೆ ಮರೆತು ಹೋದ ಅದೇ ಪರಂಪರೆಯನ್ನು ಮರುಸೃಷ್ಟಿಸುತ್ತಿರುವುದು ಕನ್ನಡಿಗರ ಸೌಭಾಗ್ಯ.

ಇಲ್ಲಿ ಇವರ ಕಾರ್ಯಕ್ರಮಕ್ಕೆ ಮತ್ತೆ ಮೆರಗು ಕೊಟ್ಟ ಕೊಳಲಿನ ಮುರಳಿ ಎನ್.ಎಸ್. ಹಾಗು ಮ್ಯಾಂಡೋಲಿನ್‌ನ ಎನ್. ಎಸ್. ಪ್ರಸಾದರವರ ಪ್ರತಿಭೆ ಮೆಚ್ಚುವಂತಹದು. 'ನೇಸರು' ಈ ಕಲಾವಿದರುಗಳ ಭವಿಷ್ಯಕ್ಕೆ ಶುಭ ಹಾರೈಸುತ್ತದೆ.

---

(ಪುಟ 20ರಿಂದ)

## ಮೈಸೂರು ಅಸೋಸಿಯೇಷನ್ನಿಗೆ ಸಚಿವೆ ಶ್ರೀಮತಿ ರಾಣಿ ಸತೀಶರವರ ಭೇಟಿ

ನೀಡಬೇಕೆಂದು ಮನವಿ ಮಾಡಿಕೊಂಡರು. ಇದುಕ್ಕುತ್ತರವಾಗಿ ಮಾನ್ಯಮಂತ್ರಿಗಳು ಹೊರ ರಾಜ್ಯಕ್ಕೆ ಆರ್ಥಿಕ ನೆರವು ನೀಡುವ ವಿಚಾರ ಇದೆ. ನಾವು ನಮ್ಮ ಮುಂದಿನ ಜನಾಂಗದವರಲ್ಲೂ ಭಾಷಾಭಿಮಾನ, ಸಾಂಸ್ಕೃತಿಕ, ಶೈಕ್ಷಣಿಕ ಐತಿಹಾಸಿಕ ಪ್ರಜ್ಞೆಯನ್ನು ಬೆಳೆಸಬೇಕು. ಅವಶ್ಯವಿದ್ದಲ್ಲಿ ನಮ್ಮನ್ನು ಸಂಪರ್ಕಿಸಿ. ಸಹಾಯ ಸೌಲಭ್ಯ ಇದೆ ಎಂದು ಆಶ್ವಾಸನೆ ನೀಡಿದರು.

ಇದೇ ಸಂದರ್ಭದಲ್ಲಿ ಅಸೋಸಿಯೇಷನ್ ಪ್ರಾರಂಭವಾದಾಗಿನಿಂದ ಇಂದಿನವರೆಗೆ ಅದರ ಹಂತ ಹಂತದ ಸಾಕ್ಷ್ಯ ಚಿತ್ರವನ್ನು ಪ್ರದರ್ಶಿಸಲಾಯಿತು. ಮಂತ್ರಿಗಳ ಜೊತೆ ಎಲ್ಲರಿಗೂ ಭೋಜನದ ಏರ್ಪಾಟು ಮಾಡಲಾಗಿತ್ತು. ನಮ್ಮ ರಾಜುವಿನ ಕೈನ ನಳಪಾಕ ಮಾನ್ಯರಿಗೆ ಬಹಳ ಮೆಚ್ಚುಗೆಯಾಯಿತು. ಆಡಳಿತ ವರ್ಗದವರು ಮಂತ್ರಿಗಳನ್ನು ಅವರು ಮುಂದಿನ ಕಾರ್ಯಕ್ರಮಕ್ಕಾಗಿ ಬೀಳ್ಕೊಟ್ಟರು.

---

(ಪುಟ 5ರಿಂದ)

## ಕರ್ನಾಟಕ ಸಾಂಸ್ಕೃತಿಕ ಪರಂಪರೆ -2

ಇವೆ. ಕಮಲ ನಾರಾಯಣ ದೇವಾಲಯವು ಕದಂಬರ ಎಲ್ಲಾ ದೇವಾಲಯಗಳಿಗಿಂತ ಹೆಚ್ಚು ಕಲಾತ್ಮಕ ವಾಗಿದೆ. ಕದಂಬ ಶೈಲಿಯ ಗೋಪುರ ಮತ್ತು ಕಳಸವನ್ನು ಇಲ್ಲಿ ಕಾಣಬಹುದು.

ಕದಂಬ ದೇವಾಲಯಗಳಲ್ಲಿ ಹೆಚ್ಚಾಗಿ ಲಿಂಗಗಳಿರುವುದನ್ನು ನಾವು ಕಾಣುತ್ತೇವೆ. ಕೆಲವು ದೇವಸ್ಥಾನಗಳಲ್ಲಿ ಮಾತ್ರ ವಿಗ್ರಹಗಳಿವೆ. ಸೊರಬ ತಾಲೂಕಿನ ಜಂಬೆ ಹಳ್ಳಿಯ 'ದುರ್ಗಾ' ದೇವಾಲಯ ಅತ್ಯಂತ ಪ್ರಾಚೀನವಾದುದು. ಹೀಗೆ ಕದಂಬರು ಕರ್ನಾಟಕದ ವಾಸ್ತು ಶಿಲ್ಪದ 'ಆದ್ಯ ಪ್ರವರ್ತಕರೂ, 'ವೇಸರ' ಪದ್ಧತಿಯ ಜನಕರೂ ಆಗಿದ್ದಾರೆ.

ಕಲೆ, ವಾಸ್ತುಶಿಲ್ಪ, ಸಾಹಿತ್ಯ, ಸಾಮಾಜಿಕ, ಆರ್ಥಿಕ, ರಾಜಕೀಯ ರಂಗಗಳಲ್ಲಿ ಅಪೂರ್ವ ಸಾಧನೆ ಮಾಡಿದ ಕದಂಬವಂಶ ಕರ್ನಾಟಕದ ಸಾಂಸ್ಕೃತಿಕ ಸಿರಿಯನ್ನು ಹೆಚ್ಚಿಸಿದೆ.

(ಮುಂದುವರಿಯುವುದು)

---

....*from page no. 11*

## IMPROVING VALUE SYSTEMS

and made pervasive so that it is accepted by all and replaces greed. Another reason for breeding a corrupt value system is lack of contentment which leads to the craze for easy money and is the root cause for propagating evil. Whereas consumerism is seen as an index of high economic standards, if it is left unrestrained, the desire to obtain amenities beyond one's reach will lead to actions performed without a sense of accountability. It may seem that a corrupt valueless society has been accepted by all but the fact is, it is not acceptable. Whenever money is used to lubricate processes, sanctions or to get work done it is even euphemistically termed as "speed money". In the process we have made a mockery of democracy which can be workable, feasible and practical only with centpercent literacy and education where people select their leaders worth understanding. As is the king, so shall be the people.

It is important to instill belief in God. Immanuel Kant three hundred years ago said that if there is no concept of God then the basic reason for ethical values collapses. A secular state is not in contradiction with a theistic attitude or a cosmopolitan culture.

Thus, we have seen the two circles which interact at various points. One the vicious circle of corruption and the other a virtuous circle of correction.

I am optimistic about the future as in one big cycle of movement, there are smaller cycles operating all the time between different people, different factors interacting with one another. Even if we cannot get back the Golden Age of total morality, much can be done to set in motion small virtuous circles which will mesh into one another and set in motion the big wheel of positive change in the value system through time.

●

# ಮಧುಶ್ರೀಯಲ್ಲಿ ಪಡಿಯೊಡೆದ ಕನ್ನಡದ ಅಕ್ಕಮಹಾದೇವಿ

ಇದೇ ತಿಂಗಳು ಜೂನ್ ೨ರ ಸಂಜೆ ಪೆಡ್ಡಾರಣ ರೋಡಿನಲ್ಲಿರುವ 'ರಶ್ಯನ್ ಕಲ್ಚರಲ್ ಸೆಂಟರ್'ನಲ್ಲಿ ಸ್ಕ್ರಿಬ್ಬಲ್ಸ್ ಆನ್‌ಅಕ್ಕ'ದ 'ಪ್ರೀಮಿಯರ್ ಷೋ' ಏರ್ಪಟ್ಟಿತ್ತು. ಚಹದೊಂದಿಗೆ ಆರಂಭವಾದ ಸಂಜೆ ಸಾಕಷ್ಟು ಪ್ರೇಕ್ಷಕರನ್ನು ಸುಮಾರು ಒಂದೂವರೆ ಗಂಟೆಗಳ ಕಾಲ ಸೆಳೆದಿತ್ತು.

ಇಂದಿನ ಕಂಪ್ಯೂಟರ್ ಯುಗದ ಜೆಟ್ ವೇಗದಲ್ಲಿ ಮುಂದೋಡುತ್ತಿರುವ ಕಾಲಮಾನದಲ್ಲಿ ೯೦೦ ವರ್ಷಗಳ ಇತಿಹಾಸದಲ್ಲಿ ಹುದುಗಿ ಹೋದ ಅಕ್ಕನ ಪಯಣದಲ್ಲಿ ತನ್ನ ಅಸ್ಮಿತೆಯನ್ನು ಹುಡುಕಲು ಹೊರಟಿರುವುದು ಮಧುಶ್ರೀಯವರ ಒಂದು ವಿಶೇಷ.

ಸುಂದರ ವಚನಗಳ ಹಿನ್ನೆಲೆಯ ಮೂಲಕ, ಗಿಜಿಗಿಡುವ ಗದ್ದಲದ ಮುಂಬೈ ಓಣಿಗಳಲ್ಲಿ, ರೈಲಿನಲ್ಲಿ, ಕಲಾವಿದರ ಕುಂಚದಲ್ಲಿ ಜನಪದ ಸಾಹಿತ್ಯಗಳಲ್ಲಿ,' ಅಕ್ಕನ, ಕ್ರಾಂತಿಕಾರಕ ಮನೋಭಾವದ, ಮಹಿಳೆಯ ಹಕ್ಕು, ಅಸ್ಮಿತೆಗಳ ಹುಡುಕಾಟದ ಪಯಣವೇ ಇಲ್ಲಿಯ ಕಥಾವಸ್ತು.

೧೨ನೇ ಶತಮಾನದ ಅಕ್ಕಮಹಾದೇವಿ. ಶರಣೆಯಾಗಿ ಕವಿಯಿತ್ರಿಯಾಗಿ ದೈವದ ಪಟ್ಟಕ್ಕೇರಿದುದು ಮಧುಶ್ರೀಯವರಿಗೆ ಕುತೂಹಲ ಕೆರಳಿಸಿದ ಅಂಶ. ಅದಕ್ಕೇ ತಮ್ಮ ಚಿತ್ರವನ್ನು ಸಂತರ ಹೆಸರಿನಲ್ಲಿ ಹುದುಗಿಹೋದ ಎಲ್ಲ ಕವಿಯಿತ್ರಿಯರಿಗೂ ಅರ್ಪಿಸಿದ್ದಾರೆ.

ಅಕ್ಕನ ಪವಾಡಗಳ ಬಗ್ಗೆ ನಿರೀಕ್ಷಣೆ ಇಟ್ಟುಕೊಂಡು ಬಂದಿದ್ದ ಕೆಲವು ಮಡಿವಂತರಿಗೆ ನಿರಾಶೆಯಾದದ್ದು ಖಂಡಿತವಾದರೂ ಇಂದಿನ ಆಧುನಿಕ ಮನೋಭಾವದ ಮಹಿಳೆಯ ಜೀವನದ ಎಳೆಗಳಿಂದ ಅಕ್ಕ ಮಹಾದೇವಿಯನ್ನು ಮರುಸೃಷ್ಟಿಸಿರುವುದು ನಿಜಕ್ಕೂ ಸ್ತುತ್ಯಾರ್ಹ.

ರಾಜ ಕೌಶಿಕನ ಬಲಾತ್ಕಾರಕ್ಕಾಗಿ ಉಟ್ಟ ಉಡುಗೆಯನ್ನೇ ತ್ಯಜಿಸಿ ಯಾರ ಹಂಗಿಲ್ಲದೆ ತನ್ನೊಲವಿನ ಚೆನ್ನಮಲ್ಲಿಕಾರ್ಜುನನನ್ನರಸಿ ಉಡುತಡಿಯಿಂದ ಶ್ರೀ ಶೈಲದವರೆಗೆ ಹೊರಟ ದಿಟ್ಟ ಮಹಿಳೆಯ ಪಯಣವನ್ನೇ ಸಾಂಕೇತಿಕವಾಗಿ ಚಿತ್ರಿಸಲಾಗಿದೆ. ಇಂಥ ಅಕ್ಕನಿಗೆ ಇಂದು ಅವಳ ಗುಡಿಯಲ್ಲೇ ಅವಳಿಗೆ ಕೆಂಪು ಸೀರೆಯನ್ನು ಡಿಸಿರುವುದು ಎಂದು ವಿಡಂಬನೆ.

ಅಕ್ಕನ ಬಗೆಗಿನ ವಿವಿಧ ಅಭಿಪ್ರಾಯಗಳನ್ನು ಮಹಿಳೆಯರಿಂದ ಸಂಗ್ರಹಿಸಿರುವುದೊಂದು ವಿಶೇಷ. ಅಕ್ಕನ ಹೆಸರಿನಲ್ಲಿ ನಡೆಯುತ್ತಿರುವ ಸಣ್ಣ ಕೈಗಾರಿಕೋದ್ಯಮ (ಹಪ್ಪಳ, ಉಪ್ಪಿನಕಾಯಿ ಮುಂತಾದ)ದ ಮಹಿಳೆಯರು ತಮ್ಮ ಜೀವನೋಪಾಯಕ್ಕಾಗಿ ಅಕ್ಕನಿಗೆ ಋಣಿಯಾಗಿದ್ದಾರೆ. ಶರಣೆಯೆಂದು ಮಾನ್ಯವಾಗಿದ್ದ ಅಕ್ಕನ, 80ರ ದಶಕದಿಂದ ಕವಿಯಿತ್ರಿಯರಿಗೆ ಸ್ಫೂರ್ತಿ ದಾಯನಿಯಾಗಿರುವ ಅಂಶವೂ ಇಲ್ಲಿ ದಾಖಲಾಗಿದೆ. ೨೧ನೇ ಶತಮಾನದ ಅಂಚಿನಲ್ಲೂ ಅಕ್ಕನನ್ನು ದೈವತ್ವದ ರೂಪದಲ್ಲಿ ಕಾಣುತ್ತಾ, ತಾನು ಅವಳ ಹೆಸರನ್ನುಳಿಸಲೇ ಜನ್ಮ ತಳೆದಿದ್ದೇನೆ ಎಂದು ದೃಢವಾಗಿ ನಂಬಿ ಬದುಕಿರುವ ಹಣ್ಣು ಮುದುಕಿಯ ನಂಬಿಕೆ ಶ್ರದ್ಧೆಗಳು ಪ್ರಶ್ನಾತೀತವಾಗಿ ನಿಲ್ಲುತ್ತವೆ. ಅಕ್ಕನನ್ನು ತನ್ನದೇ ಆದ ರೀತಿಯಲ್ಲಿ ಶೋಧಿಸುತ್ತಾ ಕಲಾವಿದೆ ನೀಲಿಮಾ ಶೇಖ್ ಛಿದ್ರಗೊಂಡಿರುವ ಆಧುನಿಕ ಮಹಿಳೆಯ ಅಸ್ಮಿತೆಯನ್ನು ಪೂರ್ಣತ್ವಕ್ಕೇರಿಸಲು ತಮ್ಮ ಕ್ಯಾನ್‌ವಾಸ್‌ಗೆ ಅಕ್ಕನ ವಚನಗಳ ಮೊರೆ ಹೊಕ್ಕಿದ್ದಾರೆ.

ಏಕಕಾಲಕ್ಕೆ ಸಾಕ್ಷಿಯಾಗಿಯೂ, ಘಟನೆಗಳಲ್ಲಿ ಪಾತ್ರವಾಗಿಯೂ ಸೀಮಾಬಿಶ್ವಾಸ್ ಚಿತ್ರದಲ್ಲಿ ಯಶಸ್ವಿಯಾಗಿ ತೊಡಗಿಸಿಕೊಂಡಿದ್ದಾರೆ. ಪಯಣದ ಅಂಚಿನಲ್ಲಿ ಅಕ್ಕನ ಹಾತೊರೆಯುವಿಕೆಯ ಹಂಬಲದ ಚಿತ್ರಣ ತುಂಬಾ ಪರಿಣಾಮಕಾರಿ ಮೂಡಿಬಂದಿದೆ. 'ಮಾಯಕದ ಮಲಭಾಂಡ' 'ಬೆಟ್ಟದ ಮೇಲೊಂದು ಮನೆಯ ಮಾಡಿ'. ವಚನಗಳು ಇಂದಿಗೂ ಪ್ರಸ್ತುತವಾಗುವುದನ್ನು ಕಾಣಬಹುದು. ಅಕ್ಕನ ಬೇರೆ ವಚನಗಳನ್ನು ಇನ್ನು ಪರಿಣಾಮಕಾರಿಯಾಗಿ ದುಡಿಸಿಕೊಳ್ಳಬಹುದಾಗಿತ್ತೇನೋ ಎನ್ನಿಸುತ್ತದೆ. ನಡುವೆ ಕೆಲವು ಅನವಶ್ಯಕವಾಗಿ ಎಳೆಯುವ ದೃಶ್ಯಗಳು ಸೇರಿವೆ. ಪೂರ್ಣ ಪರದೆಯನ್ನು ಎರಿಸುವ ತಿಳಿ ನೀಲಿ ಬಟ್ಟೆಯ ಮೂಲ ಹೊಲಿಗೆ ಯಂತ್ರವನ್ನು ಅಲ್ಲಿ ಚಿತ್ರದ ಆಶಯ (Motif) ಸೋಲುತ್ತದೆ.

ವಸ್ತುವಿನ ನೇಯ್ಗೆಗೆ ಸಂಭಾಷಣೆ ಪೂರಕವಾಗಿಲ್ಲ. ಬಹುಶಃ ಸಂಭಾಷಣೆ ದೃಶ್ಯಗಳಿಗೆ ಕೊಂಡಿಯಾಗಬಹುದಿತ್ತೇನೋ? ಇಳೆಯ ರಾಜರ ಸಂಗೀತ ಪಾತ್ರಗಳಿಗೆ ಸಹಕಾರಿಯಾಗಿಲ್ಲ.

ಗಂಭೀರ ಸನ್ನಿವೇಶಗಳಲ್ಲಿ ಅಕ್ಕನ ಚಿತ್ರಗಳು ಇಷ್ಟು ವರ್ಷ ಹಳೆಯ ತುಕ್ಕು ಹಿಡಿದ ಗೋದಾಮಿನಲ್ಲಿ ಪರದೆಯಿಂದಾ ಮರಿಸಲ್ಪಟ್ಟಿದ್ದರೂ ಅಕ್ಕನ ವಚನಗಳ ಧ್ವನಿಯನ್ನು ಯಾರೂ ಕುಗ್ಗಿಸಲಾಗಿಲ್ಲ.

ಅಕ್ಕನ ಪ್ರಸ್ತುತೆ ನಿರಂತರವಾಗಿ ಮುಂದುವರೆಯುತ್ತಿರುವ ದ್ಯೋತಕವಾಗಿ ಮುಗ್ಧ ಮಕ್ಕಳ ಈಚೆಯ ಧ್ವನಿಯಲ್ಲಿ ಅವಳ ವಚನಗಳು ಅನುರಣಿತವಾಗಿರುವುದು ಚಿತ್ರದ ಮೌಲ್ಯವನ್ನು ಹೆಚ್ಚಿಸಿದೆ.

೧೨ನೇ ಶತಮಾನದ ಅಕ್ಕನ ಅಸ್ಮಿತೆಯ ಹುಡುಕಾಟವನ್ನು ೨೧ನೇ ಶತಮಾನದ ಆದಿಯಲ್ಲಿ ಮಧುಶ್ರೀ ದತ್ತರವರು ಇಂದಿನ ಸ್ತ್ರೀವಾದಿ ಚಳುವಳಿಯಿಂದ ಹಿಂಜರಿರುವುದು ಗಮನಾರ್ಹ. ಅಕ್ಕ ಮಹಾದೇವಿ ಹೀಗೆ ಮತ್ತೆ ಮತ್ತೆ ಮರು ಹುಟ್ಟು ಪಡೆಯುತ್ತಿರುವುದು, ಅಕ್ಕನ ಜೀವಂತಿಕೆಗೆ ಸಾಕ್ಷಿ.

ಈ ಚಿತ್ರಕ್ಕೆ ನಮ್ಮವರೇ ಆದ ಡಾ. ಗಿರಿಜಾಶಾಸ್ತ್ರಿ ಕಥಾ ವಸ್ತುವನ್ನು ಹೊಸದೃಷ್ಟಿಕೋನದಿಂದ ಶೋಧಿಸಿರುವುದು ಒಂದು ವಿಶೇಷ. ಕನ್ನಡತಿಯೇ ಆದ ಫ್ಲೇಮಿಯಾ ಆಗ್ನೆಸ್ ಈ ಚಿತ್ರದ ನಿರ್ಮಾಪಕಿ ಬೆನ್ನಿನಲ್ಲಿ ಮಧುಶ್ರೀ ದತ್ತರ ಸ್ತ್ರೀ ವಾದಿ ಶೋಧನೆಯ ಪ್ರಾಮಾಣಿಕ ಪ್ರಯತ್ನ ನಿಜಕ್ಕೂ ಶ್ಲಾಘನೀಯ.

-- ರಮಾಮಣಿ.

## AN APPEAL TO ALL MEMBERS

Dear Member,

We have been able to build a beautiful State of the Art Auditorium at our premises. Due to the interest and involvement shows by all our members. This auditorium is also being made available to other organisations for holding Meetings, Seminars, Conferences and Programmes of performing Arts. We would appeal to all of you, to inform your friends and contacts about our Auditorium and its facilities, so that they could avail the services of the same. An attractive brochure giving the details of the Auditorium and facilities offered is available. We would be glad to send you copies of the same. On leasing from you. Please call up Associations office for your requirements of the brochures and other details.

*Hon. Secretary*

# ಸುತ್ತಮುತ್ತ

## ಕನ್ನಡಿಗರ ಹಿತರಕ್ಷಣೆಯಲ್ಲಿ ದೆಹಲಿಯಲ್ಲಿ ಕನ್ನಡ ಮಕ್ಕಳ ಸತ್ಯಾಗ್ರಹ

ಕರ್ನಾಟಕದ ಮತ್ತು ಕನ್ನಡಿಗರ ಹಿತರಕ್ಷಣೆಯನ್ನು ಆಗ್ರಹಿಸಿ ಬಾ. ಸಾಮಗ ಅವರ ನೇತೃತ್ವದದಲ್ಲಿ ದೆಹಲಿಯಲ್ಲಿ ಜೂನ್ 12ರಂದು ದೆಹಲಿ ಕರ್ನಾಟಕ ಸಂಘರ್ಷ ಸಮಿತಿ ಆಶ್ರಯದಲ್ಲಿ ಕನ್ನಡ ಮಕ್ಕಳು ಒಂದು ದಿನದ ಧರಣಿ ಸತ್ಯಾಗ್ರಹವನ್ನು ಯಶಸ್ವಿಯಾಗಿ ನಡೆಸಿದರು.



*ಕರ್ನಾಟಕದ ಹಿತರಕ್ಷಣೆಗಾಗಿ ದೆಹಲಿಯಲ್ಲಿ ಬಾ. ಸಾಮಗ ಅವರ ನೇತೃತ್ವದಲ್ಲಿ ಕನ್ನಡ ಮಕ್ಕಳು ಧರಣಿ ಸತ್ಯಾಗ್ರಹ ನಡೆಸಿದಾಗ.*

ತಮ್ಮ ಬೇಡಿಕೆಗಳನ್ನು ಬರೆದುಕೊಂಡ ಪಟ್ಟಿಕೆಗಳನ್ನು ತಮ್ಮ ದೇಹದ ಮೇಲೆ ತೂಗು ಹಾಕಿಕೊಂಡ ಕನ್ನಡ ಮಕ್ಕಳು ಘೋಷಣೆಗಳನ್ನು ಕೂಗುತ್ತ ಗಮನ ಸೆಳೆದರು. ಈ ಸತ್ಯಾಗ್ರಹದಲ್ಲಿ ದೆಹಲಿಯ ವಿವಿಧ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿ ಮುಖಂಡರುಗಳಾದ ಕು. ಪ್ರಿಯಾಂಕ, ಲಕ್ಷ್ಮಿತಾ, ಅಲೇಖ್ಯ, ದಿವ್ಯಶ್ರೀ, ವಂದನಾ, ಶೆಫಾಲಿ, ಶೀತಲ್, ಕಾವ್ಯಶ್ರೀ, ರೂಪ ಮತ್ತು ಶಶಾಂಕ್, ಪವನ್, ನಿತೀಶ್, ಸುಹಾಸ್, ಸಂದೀಪ್, ಅಭಿಲಾಶ್, ಸಾಯಿನಾಥ್ ಮುಂತಾದವರು ಭಾಗವಹಿಸಿದ್ದರು.

ಸತ್ಯಾಗ್ರಹಿಗಳನ್ನುದ್ದೇಶಿ ಮಾತನಾಡಿದ ಬಾ. ಸಾಮಗ ಅವರು ಕನ್ನಡ ಹಿತಕ್ಕಾಗಿ ಸತ್ಯಾಗ್ರಹದಲ್ಲಿ ಪಾಲ್ಗೊಂಡ ಮಕ್ಕಳನ್ನು ಅಭಿನಂದಿಸಿದ ರಲ್ಲದೆ, ಕೇಂದ್ರಸರಕಾರವು ನೆನಗುದಿಯಲ್ಲಿರುವ ಕರ್ನಾಟಕದ ಎಲ್ಲ ಯೋಜನೆಗಳಿಗೆ ಮಂಜೂರಾತಿ ನೀಡಿ ಕಾರ್ಯಗತಗೊಳಿಸಬೇಕು, ದಿಲ್ಲಿ - ಬೆಂಗಳೂರು ನಡುವೆ ಪ್ರತಿನಿತ್ಯ ಇನ್ನೊಂದು ರೈಲನ್ನು ಓಡಿಸಬೇಕು, ಹಾಸನ - ಮಂಗಳೂರು ಬ್ರಾಡ್‌ಗೇಜ್ ರೈಲು ಮಾರ್ಗ ಕಾರ್ಯವನ್ನು ಶೀಘ್ರವಾಗಿ ಸಂಪೂರ್ಣಗೊಳಿಸಬೇಕು, ಕರ್ನಾಟಕದಲ್ಲಿ ಎರಡು ರೈಲ್ವೇ ವಲಯ ಸ್ಥಾಪಿಸಬೇಕು, ಹುಬ್ಬಳ್ಳಿ - ಅಂಕೋಲ, ಮಡಿಕೇರಿ ಮೈಸೂರು ರೈಲು ಮಾರ್ಗ, ಆರಂಭಿಸಬೇಕು, ಮಂಗಳೂರು - ಮುಂಬೈ ಪ್ರಯಾಣಿಕರಿಗಾಗಿ ಹಡಗುಯಾನ ಆರಂಭಿಸಬೇಕು. ಗಡಿ ವಿವಾದ ಪರಿಹರಿಸಲು ಮಹಾಜನ ವರದಿ ಜಾರಿಗೆ ತರಬೇಕು - ಎಂದು ಆಗ್ರಹ ಪಡಿಸಿದರು.

ಕರ್ನಾಟಕ ಸರ್ಕಾರವು ದೆಹಲಿಯಲ್ಲಿ ಕನ್ನಡ ಸಂಸ್ಕೃತಿ ಸಂಗ್ರಹಾಲಯ ಮತ್ತು ಜನಸಾಮಾನ್ಯರಿಗಾಗಿ ಅತಿಥಿಗೃಹ ಸ್ಥಾಪಿಸಬೇಕು, ಹೊರನಾಡ ಕನ್ನಡಾಭಿವೃದ್ಧಿಗಾಗಿ ಪ್ರತ್ಯೇಕ ವಿಭಾಗ ಆರಂಭಿಸಬೇಕು. ದೂರದರ್ಶನದಲ್ಲಿ ಕನ್ನಡ ಪ್ರಚಾರಗೊಳಿಸಲು ಪ್ರತ್ಯೇಕ ಚಾನಲನ್ನು ಆರಂಭಿಸಬೇಕು, ಪ್ರತಿಭಾವಂತ ಕನ್ನಡ ಮಕ್ಕಳಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಬೇಕು ಎಂದೂ ಸತ್ಯಾಗ್ರಹದಲ್ಲಿ ಒತ್ತಾಯಿಸಲಾಯಿತು.

ದೆಹಲಿ ಸರ್ಕಾರವು ದಿಲ್ಲಿಯ ರಸ್ತೆ ಪಾರ್ಕುಗಳಿಗೆ ಖ್ಯಾತ ಕನ್ನಡಿಗರ ಹೆಸರನ್ನಿಡಬೇಕು, ಖ್ಯಾತ ಕನ್ನಡಿಗರ ಮೂರ್ತಿ ಪ್ರತಿಷ್ಠಾಪಿಸಬೇಕು. ಕನ್ನಡ ಚಟುವಟಿಕೆಗಳಿಗೆ ಬೆಂಬಲಿಸಬೇಕು ಎಂದು ಹೋರಾಟದ ಮಕ್ಕಳು ಒತ್ತಾಯಿಸಿದರು.

ತಮ್ಮ ಬೇಡಿಕೆಗಳನ್ನು ಸರಕಾರ ಈಡೇರಿಸದಿದ್ದಲ್ಲಿ ಮುಂದಿನ ನವೆಂಬರ್ 14ರಂದು ಕನ್ನಡ ಮಕ್ಕಳು ಸಂಸತ್ತಿಗೆ ಮುತ್ತಿಗೆ ಹಾಕಲಿರುವರೆಂದು ಬಾ. ಸಾಮಗ ಅವರು ಸತ್ಯಾಗ್ರಹದಲ್ಲಿ ಪ್ರಕಟಿಸಿದರಲ್ಲದೆ ಈ ಹೋರಾಟದಲ್ಲಿ ಹೆಚ್ಚಿನ ಮಕ್ಕಳು ಪಾಲ್ಗೊಳ್ಳಬೇಕೆಂದು ವಿನಂತಿಸಿಕೊಂಡರು.

## ಮುಂಬಯಿ ಕನ್ನಡ ಸಂಘದಲ್ಲಿ ಕನ್ನಡ ಸರ್ಟಿಫಿಕೇಟ್ ವಿತರಣೆ

ಮಾಟುಂಗದಲ್ಲಿರುವ ಮುಂಬಯಿ ಕನ್ನಡ ಸಂಘದ ಆಶ್ರಯದಲ್ಲಿ ತಾ. 18-06-2000ದಂದು ಕನ್ನಡ ಸರ್ಟಿಫಿಕೇಟ್ ಕೋರ್ಸಿನ ವಿದ್ಯಾರ್ಥಿಗಳಿಗೆ 'ಪ್ರಮಾಣ ಪತ್ರ' (Certificate), ವಿತರಣಾ ಕಾರ್ಯಕ್ರಮವನ್ನು ಸಂಘದ ಕಾರ್ಯಾಲಯದಲ್ಲಿ ಏರ್ಪಡಿಸಲಾಗಿತ್ತು. ಈ 'ಪ್ರಮಾಣ ಪತ್ರ' ವಿತರಣೆಯನ್ನು ಅಂದಿನ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಶ್ರೀಮತಿ ಲೀಲಾ ಆರ್. ಉಚ್ಚಿಲ್ (ಮೇಯರ್ ಪ್ರಶಸ್ತಿ ಪುರಸ್ಕೃತೆ, ನಿವೃತ್ತ ಶಿಕ್ಷಕಿ) ಇವರು ಮಾಡಿದರು.

ಅವರು ತಮ್ಮ ಭಾಷಣದಲ್ಲಿ ಇಂದು ಕನ್ನಡಿಗರಲ್ಲಿ ತಮ್ಮ ಭಾಷೆಯ ಮೇಲಿನ ಅಭಿಮಾನ ಕಡಿಮೆಯಾಗುತ್ತಿರುವ ಹಿನ್ನಲೆಯಲ್ಲಿ ಮುಂಬಯಿ ಕನ್ನಡ ಸಂಘವು ಕನ್ನಡ ಓದಲು ಹಾಗೂ ಬರೆಯಲು ಬಾರದ ಕನ್ನಡಿಗರ ಮಕ್ಕಳಿಗೆ ಹಾಗೂ ಕನ್ನಡೇತರರಿಗೆ ಕನ್ನಡವನ್ನು ಕಲಿಯುವ ಅವಕಾಶವನ್ನು ಒದಗಿಸಿ ಕನ್ನಡದ ಮೋಹ ಕಳಕಳಿಯನ್ನು ವ್ಯಕ್ತಪಡಿಸಿದೆ ಎಂದು ನುಡಿದರು.

ಇಂತಹ ಸ್ತುತ್ಯಾರ್ಹ ಕಾರ್ಯಕ್ರಮಗಳನ್ನು ಇತರ ಕನ್ನಡ ಸಂಘಗಳೂ ಹಂಚಿಕೊಳ್ಳುವ ಮೂಲಕ ಮುಂಬಯಿ ನೆಲದಲ್ಲಿ ಕನ್ನಡ ಕಂಪು ಸದಾಕಾಲ ಉಳಿಯುವಂತೆ ಮಾಡಬೇಕೆಂದು ಶ್ರೀಮತಿ ಲೀಲಾ ಉಚ್ಚಿಲ್ ಅವರು ಕರೆನೀಡಿದರು.

ಕನ್ನಡ ತರಗತಿಯಲ್ಲಿ ಶಿಕ್ಷಕಿಯಾಗಿ ದುಡಿದ ಶ್ರೀಮತಿ ಲಕ್ಷ್ಮೀ ಸುಧೀಂದ್ರ ಅವರು ಮಾತಾಡುತ್ತಾ ವಿವಿಧ ಮಾತೃ ಭಾಷೆಯ ವಿದ್ಯಾರ್ಥಿಗಳಿಗೆ ಕನ್ನಡ ಕಲಿಸುವುದು ಒಂದು ಹೊಸ ಅನುಭವ ಎಂದರಲ್ಲದೆ ಈ ವಿದ್ಯಾರ್ಥಿಗಳು ಕನ್ನಡ ಕಲಿಯಲು ತೋರಿಸುತ್ತಿದ್ದ ಉತ್ಸಾಹವನ್ನು ಕಂಡು ಅಭಿಮಾನ ಎನಿಸಿತು ಎಂದರು. ವಿದ್ಯಾರ್ಥಿಗಳ ಪರವಾಗಿ ಜಗದೀಶ್ ಕೂಳೂರು ಹಾಗೂ ವೈದ್ಯನಾಥನ್ ಮಾತನಾಡಿ ತಮಗೆ ತಮ್ಮ ಮೆಚ್ಚಿನ ಕನ್ನಡ ಭಾಷೆಯನ್ನು ಕಲಿತುಕೊಳ್ಳುವ ಅವಕಾಶವನ್ನು ನೀಡಿದ ಕನ್ನಡ ಸಂಘಕ್ಕೆ ಆಭಾರವನ್ನು ಸಲ್ಲಿಸಿದರಲ್ಲದೆ ತಮ್ಮ ಹೆಚ್ಚಿನ ವ್ಯಾಸಾಂಗಕ್ಕಾಗಿ

Regn. No. 040015/86
Regn. No. TECH/47-202/MBI-2000
Date of Posting : 10-7-2000

ಅವಕಾಶವನ್ನು ಮಾಡಿಕೊಡಬೇಕೆಂದು ಕೋರಿದರು.

ಮುಂಬಯಿ ಕನ್ನಡ ಸಂಘದ ಉಪಾಧ್ಯಕ್ಷರಾದ ಡಾ। ರಘುನಾಥ್ ಅವರು ಈ ಸಂದರ್ಭದಲ್ಲಿ ಮಾತನಾಡಿದರು. ಕನ್ನಡ ತರಗತಿಯ ವಿದ್ಯಾರ್ಥಿನಿಯಾದ ಕುಮಾರಿ ಪ್ರಿಯ ಪ್ರಸನ್ನ ಅವರ ಪ್ರಾರ್ಥನೆಯೊಂದಿಗೆ ಆರಂಭವಾದ ಕಾರ್ಯಕ್ರಮವನ್ನು ಗೌ. ಪ್ರ. ಕಾರ್ಯದರ್ಶಿ ಜಿ. ಎಸ್. ನಾಯಕ್ ಅವರು ನಿರೂಪಿಸಿದರು.

## ಕನ್ನಡ / ಮರಾಠಿ ತರಗತಿಗಳು

ಕರ್ನಾಟಕ ಸಂಘ ಕಳೆದ ಹಲವಾರು ವರ್ಷಗಳಿಂದ ನಡೆಸುತ್ತಾ ಬಂದಿರುವ ಕನ್ನಡೇತರರಿಗೆ ಕನ್ನಡ ಹಾಗೂ ಮರಾಠಿಯೇತರರಿಗೆ ಮರಾಠಿ ಭಾಷೆಯನ್ನು ಕಲಿಸುವ ಭಾಷಾ ವರ್ಗಗಳ 2000-2001ನೇ ಸಾಲಿನ ತರಗತಿಗಳು ಇದೇ ಬರುವ ಆಗಸ್ಟ್ 5ರಿಂದ ಪ್ರಾರಂಭವಾಗಲಿದೆ. ಆ ಕುರಿತ ಅರ್ಜಿ ಫಾರಂಗಳನ್ನು ಸಂಘದ ಕಛೇರಿಯಿಂದ ಪಡೆಯಬಹುದಾಗಿದ್ದು ತರಗತಿಗೆ ಸೇರಲಿಚ್ಛಿಸುವವರು ಒಟ್ಟು ರೂ. 150/-ನ್ನು ಶುಲ್ಕದ ರೂಪದಲ್ಲಿ ಕೊಡಬೇಕಾಗುವದು. ಹೆಚ್ಚಿನ ಮಾಹಿತಿಯನ್ನು ಮಾಹಿತಿ ಅಧಿಕಾರಿ, ಕರ್ನಾಟಕ ಸಂಘ ಮುಂಬಯಿ ಇವರನ್ನು ದೂರವಾಣಿ ಸಂಖ್ಯೆ 4377022/4379645ರ ಮೂಲಕ ಸಂಪರ್ಕಿಸಿ ಪಡೆಯಬಹುದು.

## ಮುಂಬಯಿ ವಿಶ್ವವಿದ್ಯಾಲಯ ಕನ್ನಡ ಎಂ.ಎ. ಪ್ರವೇಶ

ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗದಲ್ಲಿ ಸ್ನಾತಕೋತ್ತರ ಪದವಿಗೆ ಸೇರಬಯಸುವ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

ಕನ್ನಡ ಎಂ.ಎ. ತರಗತಿಗೆ ಸೇರಬಯಸುವ ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಮುಖ್ಯಸ್ಥರು, ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಸಾಂತಾಕ್ರೂಜ್ (ಪೂ), ವಿದ್ಯಾನಗರಿ, ಮುಂಬಯಿ-400 098. (ದೂರವಾಣಿ ನಂ. 6526091 ವಿಸ್ತರಣೆ 345, 469) ಈ ವಿಳಾಸಕ್ಕೆ ಸಂಪರ್ಕಿಸಲು ಕೋರಲಾಗಿದೆ.

ಅಂಚೆ ಮೂಲಕ ಅರ್ಜಿಗಳನ್ನು ತರಿಸಿಕೊಳ್ಳಲು ಬಯಸುವವರು, The Head, Dept. of Kannada, Univ. of Mumbai, Vidyanagari, Mumbai-400 098. ಈ ವಿಳಾಸಕ್ಕೆ 50 ರೂ. ಎಂ.ಓ. ಅಥವಾ ಡಿ.ಡಿ. ಕಳುಹಿಸಬೇಕು. ಅಲ್ಲದೇ ಸ್ವವಿಳಾಸವಿರುವ ಮೂರು ರೂಪಾಯಿ ಮೌಲ್ಯದ ಅಂಚೆ ಚೀಟಿ ಹಚ್ಚಿದ ಲಕೋಟೆಯನ್ನು ಸಹ ತಪ್ಪದೇ ಜೊತೆಗಿರಿಸಬೇಕು.

(ಪುಟ 3ರಿಂದ)

# ರಂಜನೀಯ ಸಾಂಜೆ

ಕವಿಗಳು. ಜೋಗದ ಜಲಪಾತ ಪ್ರಕೃತಿಯ ಸಿರಿಯನ್ನೇ ಹೊತ್ತಿದೆ. ಅಂತಹ ''ಜೋಗದ ಸಿರಿ ಬೆಳಕಿನಲ್ಲಿ....'' ಎಂಬ ನಿಸ್ಸಾರ್ ಅಹಮದ್‌ರ ಕವನದೊಂದಿಗೆ ಕನ್ನಡ ತಾಯಿಗೆ ''ನಿತ್ಯೋತ್ಸವ''ವನ್ನು ಕೋರಿದರು ಗಾಯಕರು. ನಂತರ Dr. D.S. ಕರ್ಕಿ ಅವರ ''ಹಚ್ಚೇವು ಕನ್ನಡದ ದೀಪ... '' ಕವನದಿಂದ ಭಾರತ ಮಾತೆಗೆ ಒಲವು ಪ್ರೀತಿಗಳ ಹಣತೆಗಳಲ್ಲಿ ಕನ್ನಡದ ಸಿರಿ ನುಡಿಯ ದೀಪಗಳನ್ನು ಬೆಳಗಿದರು.

ಸುಗಮ ಸಂಗೀತವು ಭಾವನೆಗಳನ್ನು ವ್ಯಕ್ತಪಡಿಸುವ ಪೂರಕ R.N. ಜಯಗೋಪಾಲ ವಿರಚಿತ ಒಂದು ಭಕ್ತಿ ರಚನೆಯನ್ನು ಹಾಡಿದರು. 'ಯಾನವ ಮಾಡಿದೆ ಭವಸಾಗರದೊಳಗೆ....'' ಎಂಬ ಗೀತೆ ಭಕ್ತಿ ಭಾವವೇ ಪ್ರಧಾನವಾದ ಈ ಗೀತೆಯಲ್ಲಿ ಮನುಷ್ಯನು ಭೂಮಿಗೆ ಬಂದ ಮೇಲೆ ಅನೇಕ ಪಾಪ ಕರ್ಮಗಳನ್ನು ಮಾಡುತ್ತಾನೆ. ಅರಿಷಡ್ವರ್ಗದ ಬಿರುಗಾಳಿಗೆ, ಆಸೆಗಳೆಂಬ ಅಲೆಗಳಿಗೆ ಸಿಕ್ಕಿ ಜೀವ ಅಲ್ಲಾಡಿದೆ, ಮಾಡಿದ ಪಾಪಗಳನ್ನು ತೊಳೆಯಲು ನಿನ್ನ ನಾಮ ಒಂದೇ ಆಧಾರ. ಕರ್ಪೂರ ಕರಗುವಂತೆ ಪಾಪಗಳನ್ನು ಕರಗಿಸಿ ಕತ್ತಲೆ ನೀಗಿ ದಾರಿ ತೋರೊ ಎಂದು ಭಕ್ತಿಯಿಂದ ಕೇಳಿಕೊಳ್ಳುತ್ತಾನೆ.

ನಂತರ ರತ್ನನ ಪದಗಳು, ಜಿ.ಪಿ. ರಾಜರತ್ನಂ ವಿರಚಿತ. ಈ ರತ್ನದ ಪದಗಳು ಬಹು ಜನಪ್ರಿಯ, ''ಹೇಳ್ಕೊಳ್ಳೊಕ್ಕೊಂದೂರು.... ''. ಮತ್ತು ''ನಂಗೂ ಹೆಂಡಕ್ಕೂ ಬಲುದೋಸ್ತು....'' ರತ್ನನಿಗೂ ಹೆಂಡಕ್ಕೂ ಬಲುದೋಸ್ತಿದ್ದರೂ, ಕುಡಿತದ ಅಮಲಿನಲ್ಲಿದ್ದರೂ ರತ್ನನ ಪದಗಳು ಸ್ಪಷ್ಟ, ಸತ್ಯ. ಅದಕ್ಕೆ ಹೇಳ್ತಾರೆ ''ಕವಿ ಕಾಣದ್ದು ಕುಡ್ಕ ಕಂಡ'' ಅಂತ.

ಮೈಸೂರು ಮಲ್ಲಿಗೆಯ ಕಂಪು ಯಾರಿಗೆ ಗೊತ್ತಿಲ್ಲ? ಕೆ.ಎಸ್. ನರಸಿಂಹ ಸ್ವಾಮಿಯವರ ''ದೀಪವು ನಿನ್ನದು.....'' ರತ್ನಮಾಲರವರ ಇಂಪು ಗಾಯನದಲ್ಲಿ ಚೆನ್ನಾಗಿ ಮೂಡಿ ಬಂತು. ನಾಯಿಕೆಯು ಬಾಳಿನ ಬೆಳಕು ಆರದಿರಲೆಂದು ಕೋರುತ್ತಾಳೆ.

ಮಾಲತಿಶರ್ಮರ ಧ್ವನಿಯಲ್ಲಿ ಕುವೆಂಪುರವರ 'ಬೃಂದಾವನಕೆ ಹಾಲನು, ಮಾರಲು.... ಹಾಗೂ ಮುದ್ದು ಕೃಷ್ಣ ಅವರ ಧ್ವನಿಯಲ್ಲಿ ''ಸುಗ್ಗಿಯ ಬಣ್ಣದ....'' ಕುವೆಂಪು ವಿರಚಿತ ಗೀತೆಗಳನ್ನು ಹಾಡಿದರು.

ನಿಸ್ಸಾರ್ ಅಹಮದ್‌ರ ''ಕುರಿಗಳು ಸಾರ್....'' ರಾಜು ಅನಂತ ಸ್ವಾಮಿಯವರು ಬಹಳ ಚೆನ್ನಾಗಿ ಹಾಡಿದರು. ಪ್ರೇಕ್ಷಕರು ಹರ್ಷೋದ್ಗಾರ ಮಾಡಿದರು. ''ಮಂದೆಯಲಿ ಒಂದಾಗಿ ಸ್ವಂತದಲಿ ಬಂದಾಗಿ'' ಎಂಬಂತೆ ಮನುಷ್ಯನು ಕೆಲವೊಮ್ಮೆ ಸ್ವಂತಿಕೆ ಇಲ್ಲದೆ ಕುರಿಗಳಂತೆ ವರ್ತಿಸುತ್ತಾನೆ.... ಇದೇ ಕವಿಯ ''ಮತ್ತದೇ ಬೇಸರ...'' ಎಂಬ ಗೀತೆಯನ್ನು ಹಾಡಿದರು.

ಪ್ರಕೃತಿಯ ಸಿರಿಯ ಸೊಬಗನ್ನು ವರ್ಣಿಸಲು ಕವಿಗಳೇ ಸರಿ. ''ರವಿ ಕಾಣದ್ ಕವಿ ಕಂಡ'' ಅಂತ ಹೇಳುವಂತೆ, ರವಿ ಕಾಣದ ಪ್ರಕೃತಿಯ ಸೊಬಗನ್ನು ಕವಿ ತನ್ನ ಕಾವ್ಯಗಳಲ್ಲಿ ವರ್ಣಿಸುತ್ತಾನೆ. ಜಿ.ಪಿ. ರಾಜರತ್ನಂರವರ ''ಮಡಕೇರಿ ಮೇಲ್ ಮಂಜು.... ಗೀತೆಯಲ್ಲಿ ಮಡಕೇರಿಯಲ್ಲಿ ಮಂಜು ಬಿದ್ದಾಗ ಆಗುವ ಪ್ರಕೃತಿಯ ಸೊಬಗಿನ ಸಿರಿಯನ್ನು ವರ್ಣಿಸಿದರು ಗಾಯಕರು.

ಬೇಂದ್ರೆಯವರ ಧಾರವಾಡ ಕನ್ನಡದಲ್ಲಿನ ''ಘಮ ಘಮಾಡ ಸ್ತಾವ ಮಲ್ಲಿಗೆ...'' ಹಾಗೂ ''ಇನ್ನು ಯಾಕೆ ಬರಲಿಲ್ಲವ ಹುಬ್ಬಳಿಯವ.....,

ಗೋಪಾಲಕೃಷ್ಣ ಅಡಿಗರ, ಲಕ್ಷ್ಮೀನಾರಾಯಣ ಭಟ್ಟರ ಕವಿತೆಗಳನ್ನೂ ಹಾಡಿದರು. ಪ್ರೇಕ್ಷಕರು ಬಹಳ ಸಂತೋಷಪಟ್ಟರು. ಈ ಕವಿತೆಗಳನ್ನು ಬರೆದವರಲ್ಲಿ ಅನೇಕರು ನಮ್ಮ ಅಸೋಸಿಯೇಷನ್ನಿನ ವೇದಿಕೆಯ ಮೇಲೆ ಭಾಷಣವನ್ನು ಮಾಡಿದ್ದಾರೆ. ಪ್ರೇಕ್ಷಕರ ಬೇಡಿಕೆಯ ಕೆಲವು ಗೀತೆಗಳನ್ನು ಹಾಡಿದರು. ಕೊನೆಯಲ್ಲಿ ಶ್ರೀಮತಿ ಮಾಲತಿ ಶರ್ಮ ಅವರು ಮತ್ತೊಮ್ಮೆ ಎಲ್ಲರಿಗೂ ವಂದಿಸಿ ಕಾರ್ಯಕ್ರಮದ ಕೊನೆಯದಾಗಿ ಜಿ.ಎಸ್. ಶಿವರುದ್ರಪ್ಪನವರ ''ಎದೆ ತುಂಬಿ ಹಾಡಿದನು...'' ಎಂಬ ಗೀತೆಯನ್ನು ಶ್ರೋತೃಗಳು ಮನ ಮುಟ್ಟುವಂತೆ ಹೇಳಿದರು. ಅವರ ಮಾತಿನಲ್ಲೇ ಹೇಳುವುದಾದರೆ ''ಹಾಡುವ ಹಕ್ಕಿಗೆ ಬೇಕೆ ಬಿರುದು ಸನ್ಮಾನ...''

ಅಸೋಸಿಯೇಶನ್ನಿನ ಸಭಾಭವನವು ಪೂರ್ತಿಯಾಗಿ ತುಂಬಿತ್ತು. ಇಷ್ಟು ಜನ ಕನ್ನಡಾಭಿಮಾನಿಗಳು ಮುಂಬೈನಲ್ಲಿ ಇರುವುದು ನೋಡಿ ಕಲಾವಿದರಿಗೆ ಬಹಳ ಆಶ್ಚರ್ಯ ಹಾಗೂ ಸಂತೋಷವಾಯಿತು. ಕನ್ನಡಿಗರ ಬಗ್ಗೆ ಬಹಳ ಅಭಿಮಾನ ಪಟ್ಟರು.

-- *ರಮಾ ವಸಂತ್*

Edited, Printed & Published by M.A.N. Prasad, On behalf of the Mysore Association, Mumbai. Tel.: 402 46 47
Printed at Aarati Art Printers, Fort, Mumbai-400 001. * 266 33 61 / 266 59 38